# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ .

ಸಂಖ್ಯೆ:ತೋಉನಿ:ಜಿಪಂ:ಚಿಪುರ:ಕೇಕಸ: :2018-19 ದಿನಾಂಕ:

## <u>ಸಾರ್ವಜನಿಕ ಮಾಹಿತಿಗೆ ಪ್ರಕಟಣೆ</u>

## <u>2017-18</u>

ಮಾಹಿತಿ ಹಕ್ಕು ಅಧಿನಿಯಮ, 2005 ಪ್ರಕರಣ 4(1) (b)ಅಡಿಯಲ್ಲಿ ಮಾಹಿತಿ ಪ್ರಕಟಣೆ

1. ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು.

## <u>ಸಾಮಾನ್ಯ ಮಾಹಿತಿ</u>

ಕನ್ನಡ ನಾಡು ಚಿನ್ನದ ಬೀಡು ಎಂಬ ನಾನ್ನುಡಿಗೆ ಮೂಲ ಕಾರಣವಾದ ಕೋಲಾರ ಜಿಲ್ಲೆಯಿಂದ ಬೇರ್ಪಟ್ಟು ಚಿಕ್ಕಬಳ್ಳಾಪುರ ಜಿಲ್ಲೆಯಾಗಿ ದಿನಾಂಕ:23.08.2007 ರಿಂದ ಆರು ತಾಲ್ಲೂಕುಗಳನ್ನೊಳಗೊಂಡ ಚಿಕ್ಕಬಳ್ಳಾಪುರ ಜಿಲ್ಲೆಯು ಕಾರ್ಯಾರೂಪ ಮಾಡಿರುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ದಿಕ್ಕಿನಲ್ಲಿದೆ. ಚಿಕ್ಕಬಳ್ಳಾಪುರ ಜಿಲ್ಲೆಯು 4254 ಚ.ಕಿ.ಮೀ. ಪ್ರದೇಶವನ್ನು ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪಿಸಿರುತ್ತದೆ. ಜಿಲ್ಲೆ 13$^{o}$ 26’ ಉ. ಅಕ್ಷಾಂಶದಿಂದ 13$^{o}$ 43’ ಉ. ಅಕ್ಷಾಂಶ ಮತ್ತು 77 43’ ಪೂ. ರೇಖಾಂಶದಿಂದ 77 72 ಪೂ. ರೇಖಾಂಶದಡಿಯಲ್ಲಿ ಸ್ಥಿರವಾಗಿರುವ ಜಿಲ್ಲೆ ಸಮುದ್ರ ಮಟ್ಟದಿಂದ 911.665 ಮೀ ಎತ್ತರ ಪ್ರದೇಶದಲ್ಲಿ ಇರುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆ 1514 ಹಳ್ಳಿಗಳನ್ನು ಹೊಂದಿದ್ದು 151 ಗ್ರಾಮ ಪಂಚಾಯಿತಿಗಳನ್ನು ಹೊಂದಿರುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆ 26 ಹೋಬಳಿಗಳನ್ನು ಹೊಂದಿದ್ದು, 6 ತಾಲ್ಲೂಕುಗಳಾಗಿ ವಿಂಗಡಿಸಲ್ಪಟ್ಟಿದೆ. 2001ರ ಜನಗಣತಿಯ ಪ್ರಕಾರ 11,49,007 ಜನ ಸಂಖ್ಯೆಯನ್ನು ಹೊಂದಿದ್ದು, 9,27,985 ಜನರು (81%) ಗ್ರಾಮೀಣ ಪ್ರದೇಶದಲ್ಲೇ ವಾಸಿಸುತ್ತಾರೆ. ಭೌಗೋಳಿಕವಾಗಿ ಜಿಲ್ಲೆ4,04,501 ಹೆ. ಭೂ ಪ್ರದೇಶವನ್ನು ಹೊಂದಿದ್ದು, ಅದರಲ್ಲಿ 49,704 ಹೆ. ಪ್ರದೇಶ ಅರಣ್ಯದಿಂದ ಕೂಡಿದೆ. ಒಟ್ಟು 1,74,222 ಹೆ. ಬಿತ್ತನೆ ಪ್ರದೇಶದಲ್ಲಿ 41540 ಹೆ. ತೋಟಗಾರಿಕೆ ಪ್ರದೇಶ ಜಿಲ್ಲೆಯಲ್ಲಿರುತ್ತದೆ. ಜಿಲ್ಲೆಯಲ್ಲಿ 2,03,847 ಕೃಷಿ ಕುಟುಂಬಗಳು ವಾಸಿಸುತ್ತಿದ್ದು 1,73,757 ಕುಟುಂಬಗಳು ಸಣ್ಣ ಮತ್ತು ಅತಿ ಸಣ್ಣ ಕುಟುಂಬಗಳಾಗಿರುತ್ತವೆ. ಜಿಲ್ಲೆಯ ಜನರ ಮುಖ್ಯ ಕಸಬು ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಹೈನೋದ್ಯಮವಾಗಿರುತ್ತದೆ.



# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

ಚಿಕ್ಕಬಳ್ಳಾಪುರ ಜಿಲ್ಲೆಯು ಕರ್ನಾಟಕ ರಾಜ್ಯದ ದಕ್ಷಿಣ ದಿಕ್ಕಿನಲ್ಲಿದೆ. ಈ ಜಿಲ್ಲೆಯನ್ನು ಪೂರ್ವ ಕೃಷಿ ವಲಯವೆಂದು ವಿಂಗಡಿಸಲಾಗಿದೆ. ಜಿಲ್ಲೆಯ ಪೂರ್ವಕ್ಕೆ ಕೋಲಾರ ಜಿಲ್ಲೆ ಪಶ್ಚಿಮಕ್ಕೆ ತುಮಕೂರು ಜಿಲ್ಲೆ, ಉತ್ತರ ಪ್ರದೇಶಕ್ಕೆ ಕರ್ನಾಟಕ ರಾಜ್ಯದ ಗಡಿ ಭಾಗಗಳನ್ನು ಹಾಗೂ ದಕ್ಷಿಣಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಂದಿದೆ. ಈ ಜಿಲ್ಲೆಯು ಬಾಗೇಪಲ್ಲಿ, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಗುಡಿಬಂಡೆ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳನ್ನೊಳಗೊಂಡಿರುತ್ತದೆ. ಜಿಲ್ಲೆಯ ಗಡಿಯು ಭೌಗೋಳಿಕವಾಗಿ ಯಾವುದೇ ನದಿ ಅಥವಾ ಪರ್ವತಗಳಿಂದ ಬೇರ್ಪಟ್ಟಿರುವುದಿಲ್ಲ. ಜಿಲ್ಲೆಯ ಮಧ್ಯೆ ಮತ್ತು ಪೂರ್ವಭಾಗವು ಕಣಿವೆಮಾರ್ಗದಿಂದ ಕೂಡಿದ್ದು, ಇಲ್ಲಿ ಜಿಲ್ಲೆಯ ಉತ್ತರ ಗಡಿಯು ಕಣಿವೆ ಪ್ರದೇಶವಾಗಿದ್ದು, ಆಂಧ್ರ ಪ್ರದೇಶದ ಅನಂತಪುರದವರೆಗೂ ಹೆಚ್ಚು ಸಮತಟ್ಟಾದ ಪ್ರದೇಶವಾಗಿದೆ. ಜಿಲ್ಲೆಯು ಅನೇಕ ಬೆಟ್ಟಗಳಿಂದ ಆವೃತವಾಗಿದ್ದು, ಈ ಬೆಟ್ಟಗಳು ದೊಡ್ಡ ಗ್ರಾನೈಟ್ ಕಲ್ಲುಗಳಿಂದ ಕೂಡಿದೆ. ಈ ಬಂಡೆಗಳು ಭಾರೀ ನಿರ್ಮಾಣಕ್ಕೆ ಬೇಕಾಗುವ ಕಲ್ಲು ಮತ್ತು ಚಪ್ಪಡಿಗಳ ಮುಖ್ಯ ಮೂಲವಾಗಿದೆ. ಈ ಜಿಲ್ಲೆಯು ಸಮುದ್ರ ಮಟ್ಟದಿಂದ 911.665 ಮೀ ಎತ್ತರ ಪ್ರದೇಶದಲ್ಲಿರುತ್ತದೆ. ಈ ಪ್ರದೇಶವು ಸರಾಸರಿ 773 ಮೀ. ಮಳೆಯನ್ನು ವಾರ್ಷಿಕವಾಗಿ ಪಡೆಯುತ್ತದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್ಚಾಗಿ ಮರಳು ಮಿಶ್ರಿತ ಕೆಂಪು ಮಣ್ಣು ಆವರಿಸಿದ್ದೂ, ಸಮತೋಲನವಾದ ಹವಾಗುಣವಿದ್ದು, ಒಣಹವೆಯಿಂದ ಕೂಡಿರುತ್ತದೆ. ಇಡೀ ವರ್ಷದ ಹವಾಗುಣಕ್ಕೆ ಅನುಗುಣವಾಗಿ ನಾಲ್ಕು ಋತುಮಾನಗಳಾಗಿ ವಿಂಗಡಿಸಬಹುದು. ಜನವರಿ ಯಿಂದ ಫೆಬ್ರವರಿ ತನಕ ಒಣಹವೆ (25-30$^{O}$ C) ಇರುತ್ತದೆ. ಮಾರ್ಚ್ ನಿಂದ ಮೇ ವರೆಗೆ(28-30$^{o}$ c) ಬಿಸಿ ಹವೆ, ಜೂನ್ ನಿಂದ ಸೆಪ್ಟೆಂಬರ್ ವರೆಗೆ (25-30$^{O}$ C)ನೈರುತ್ಯ ಮಾರುತ ಹಾಗೂ ಅಕ್ಟೋಬರ್ ರಿಂದ ಡಿಸೆಂಬರ್(23-30$^{O}$ C) ಈಶಾನ್ಯ ಮಾರುತ ಕಾಲವಾಗಿರುತ್ತದೆ. ಸಾಮಾನ್ಯವಾಗಿ ಜಿಲ್ಲೆಯ ಮಣ್ಣು ಆಮ್ಲಿಯ ರಸಸಾರವನ್ನು ಹೊಂದಿದೆ. ಸಾವಯವ ಇಂಗಾಲ ಮಣ್ಣಿನಲ್ಲಿ ಸಾಕಷ್ಟು ಇದ್ದರೆ, ಪೊಟ್ಯಾಷ್ ಮತ್ತು ರಂಜಕ ಅಂಶ ಮಧ್ಯಮ. ಜಿಲ್ಲೆಯ ಮಣ್ಣು ಜಿಂಕ್ ಮತ್ತು ಬೋರಾನ್ ಕೊರತೆಯನ್ನು ಹೊಂದಿದೆ.

ಜಿಲ್ಲೆಯಲ್ಲಿ ವರ್ಷವಿಡೀ ತುಂಬಿ ಹರಿಯುವ ನದಿಗಳಿರುವುದಿಲ್ಲ, ಆದರೆ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ದಕ್ಷಿಣ ಪಿನಾಕಿನ ನದಿಯು ಮಳೆಗಾಲದಲ್ಲಿ ಹಾಗೂ ಚಿಂತಾಮಣಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಪಾಪಾಗ್ನಿ ನದಿಯು ಹರಿಯುತ್ತದೆ.

**ಜಿಲ್ಲೆಯ ವಿಶೇಷ ತೋಟಗಾರಿಕಾ ಬೆಳೆಗಳು**

| ಬೆಳೆ | ತಳಿ |
|---|---|
| ದ್ರಾಕ್ಷಿ | ಬೆಂಗಳೂರು ನೀಲಿ, ದಿಲ್ ಕುಷ್, ಅನಾಬಿ ಷಾಹಿ, ಶರತ್ ಸೀಡ್ ಲೇಸ್ |
| ಆಲೂಗಡ್ಡೆ | ಕುಫ್ರಿಜ್ಯೋತಿ |
| ಟಮೋಟೋ | ಅಭಿನವ್, 618, ಅರ್ಕಾ ರಕ್ಷಕ್, ಅರ್ಕಾ ಸಾಮ್ರಾಟ್ |
| ಮಾವು | ಬಾದಾಮಿ, ಬೆಂಗಳೂರು, ನೀಲಂ, ಮಲ್ಲಿಕಾ, ಬೆನೀಷಾ |
| ಬಾಳೆ | ಜಿ-9, ಏಲಕ್ಕಿ |
| ಗುಲಾಬಿ ಈರುಳ್ಳಿ | ಅಗ್ರಿ ಫೌಂಡ್ ರೋಸ್, ಇತರೆ |
| ಕ್ಯಾರೆಟ್ | ಟೋಕಿಟೋ |
| ಗುಲಾಬಿ | ಚೆರಿಷ್ಮಾ, ರೂಬಿ ರೆಡ್, ಫೈವ್ ಸ್ಟಾರ್, ಅಂಬರ್ ಸ್ಟಾರ್, ರೂಬಿ ಸ್ಟಾರ್ |

| | |
|---|---|
| ಗ್ಲಾಡಿಯೋಲಸ್ | ಫ್ರೆಂಡ್ ಷಿಪ್ ವೈಟ್,ಅಮೇರಿಕನ್ ಬ್ಯೂಟಿ, ಸನ್ ಸೆಟ್ ಎಲ್ಲೋ ಆಸ್ಕರ್ |
| ಸುಗಂಧರಾಜ | ಅರ್ಕಾ ಪ್ರಜ್ವಲ್, ಇತರೆ |
| ಮೆಣಸಿನಕಾಯಿ | ಗೌರಿಬಿದನೂರು, ಡೆಮಾನ್, ಚಿಕ್ಕಬಳ್ಳಾಪುರ ಲೋಕಲ್ |
| ಕನಾಕಂಬರ | ಅರ್ಕಾ ಅಂಬರ, ಅರ್ಕಾ ಸೌಂದರ್ಯ, ಇತರೆ |

## 2. ಉಪ ನಿರ್ದೇಶಕರ ಕಛೇರಿಯ ವ್ಯಾಪ್ತಿಗೆ ಬರುವ ಕಛೇರಿಗಳು:-

| ಕ್ರ.ಸಂ. | ಕಛೇರಿಯ ಹೆಸರು | ತಾಲ್ಲೂಕು |
|---|---|---|
| 1. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |
| 2. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಚಿಂತಾಮಣಿ | ಚಿಂತಾಮಣಿ |
| 3. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಗೌರಿಬಿದನೂರು | ಗೌರಿಬಿದನೂರು |
| 4. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಶಿಡ್ಲಘಟ್ಟ | ಶಿಡ್ಲಘಟ್ಟ |
| 5. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಬಾಗೇಪಲ್ಲಿ | ಬಾಗೇಪಲ್ಲಿ |
| 6. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ) ಗುಡಿಬಂಡೆ | ಗುಡಿಬಂಡೆ |
| 7. | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ |

## 3. ಜಿಲ್ಲೆಯಲ್ಲಿರುವ ತೋಟಗಾರಿಕೆ ಬೆಳೆಗಳ ಮಾಹಿತಿ:

2017-18ನೇ ಸಾಲಿಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 42793 ಹೆ. ತೋಟಗಾರಿಕೆ ಪ್ರದೇಶ ಇರುತ್ತದೆ, ಶೇ.____ ರಷ್ಟು ಪ್ರದೇಶವನ್ನು ತೋಟಗಾರಿಕಾ ಬೆಳೆ ಆಕ್ರಮಿಸಿಕೊಂಡಿರುತ್ತದೆ. ವಿವಿಧ ತೋಟಗಾರಿಕಾ ಬೆಳೆಗಳ ಅಡಿ ಇರುವ ಪ್ರದೇಶಗಳ ವಿವರ ೦ೀ ಕೆಳಗಿನಂತಿರುತ್ತದೆ.

**ಕಳೆದ ಸಾಲಿಗೆ ತೋಟಗಾರಿಕಾ ಬೆಳೆಗಳ ಉತ್ಪನ್ನ ಸುಮಾರು**

| ಕ್ರ.ಸಂ | ಬೆಳೆಗಳು | ವಿಸ್ತೀರ್ಣ (ಹೆ.) | ಉತ್ಪನ್ನ (ಟನ್) | ಇಳುವರಿ (ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1. | ಹಣ್ಣಿನ ಬೆಳೆಗಳು | 21677 | 325385 | 91 | 46596 |
| 2. | ತರಕಾರಿ ಬೆಳೆಗಳು | 13804 | 370031 | 149 | 40507 |
| 3. | ಸಾಂಬಾರು ಬೆಳೆಗಳು | 1153 | 6561 | 35 | 2916 |
| 4. | ತೋಟದ ಬೆಳೆಗಳು | 3455 | 8075 | 15 | 2014 |
| 5. | ವಾಣಿಜ್ಯ ಬೆಳೆಗಳು | 2460 | 19406 | 47 | 12013 |
| 6. | ಸುಗಂಧಿತ ಬೆಳೆಗಳು | 104 | 1136 | 33 | 87 |
| 7. | ಪಾಲಿಹೌಸ್ ಬೆಳೆಗಳು | 139.01 | 14048 | 778 | 2183 |
| | ಒಟ್ಟು | 42793 | 744643 | 1147 | 106316 |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

**ತಾಲ್ಲೂಕುವಾರು ತೋಟಗಾರಿಕೆ ಬೆಳೆಗಳ ಮಾಹಿತಿ:-**

| ಕ್ರ.ಸಂ. | ತಾಲ್ಲೂಕು | ವಿಸ್ತೀರ್ಣ (ಹೆ.) | ಉತ್ಪನ್ನ (ಟನ್) | ಇಳುವರಿ (ಟನ್/ಹೆ.) | ಮೌಲ್ಯ (ರೂ.ಲಕ್ಷ) |
|---|---|---|---|---|---|
| 1. | ಚಿಕ್ಕಬಳ್ಳಾಪುರ | 10584 | 285170 | 198 | 41013 |
| 2. | ಚಿಂತಾಮಣಿ | 11892 | 159752 | 172 | 24212 |
| 3. | ಗೌರಿಬಿದನೂರು | 6201 | 80522 | 151 | 12910 |
| 4. | ಶಿಡ್ಲಘಟ್ಟ | 8509 | 116477 | 354 | 13354 |
| 5. | ಬಾಗೇಪಲ್ಲಿ | 4303 | 83702 | 124 | 12820 |
| 6. | ಗುಡಿಬಂಡೆ | 1304 | 19019 | 149 | 2007 |
| | ಒಟ್ಟು | 42793 | 744643 | 1147 | 106316 |

**4. ಜಿಲ್ಲೆಯಲ್ಲಿರುವ ತೋಟಗಾರಿಕಾ ಕ್ಷೇತ್ರ/ಸಸ್ಯಗಾರಗಳ ಮಾಹಿತಿ:**

| ಕ್ರ. ಸಂ. | ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರಗಳ ಹೆಸರು ಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಬೇಕಾಗಿರುವ ವಿಸ್ತೀರ್ಣ (ಎಕರೆ) | ಮೂಲಭೂತ ಸೌಕರ್ಯ ಮತ್ತು ಸಸ್ಯ ಸಂಪತ್ತಿನ ವಿವರ |
|---|---|---|---|---|---|
| 1. | ಪಿ.ಆರ್.ಎಸ್.ತೋಟಗಾರಿಕೆ ಕ್ಷೇತ್ರ, ಚಿಕ್ಕಬಳ್ಳಾಪುರ | 47.28 | 47.28 | - | **ಸಸ್ಯ ಸಂಪತ್ತು**<br>ಮಾವು=354, ಸಪೋಟ=994, ತೆಂಗು=77, ಸೀಬೆ=780, ಕರಿಬೇವು=36, ಹಲಸು=08, ನೆಲ್ಲಿ=60, ನೇರಳೆ=250, ಗೋಡಂಬಿ=30, ಅಂಜೂರ=02, ಚಕ್ಕೋತ=06, ಹುಣಸೇ=10 ಮತ್ತು ಸೀತಾಫಲ=10.<br>**ಮೂಲಭೂತ ಸೌಕರ್ಯ**<br>ಹಸಿರು ಮನೆ-05, ನೆರಳು ಪರದೆ-04, ಜೀವಸಾರ ಘಟಕ-01, ಎರೆಹುಳು ಗೊಬ್ಬರ ಉತ್ಪಾದನಾ ಘಟಕ-01, ಹನಿ ನೀರಾವರಿ ಅಳವಡಿಕೆ(ವಿಸ್ತೀರ್ಣ ದಲ್ಲಿ)-05 ಹೆಕ್ಟೇರ್, ಪಂಪ್ ಹೌಸ್-02, ದಾಸ್ತಾನು ಕೊಠಡಿ-01, ಕಛೇರಿ ಕಟ್ಟಡ-01, ನೀರಿನ ತೊಟ್ಟಿ-05, ಮಳೆನೀರು ಸಂಗ್ರಹಣಾ ಘಟಕ-02, ಕಾಂಪೌಂಡ್ ವಾಲ್-01, ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ ಕಟ್ಟಡ-01, GI ತರಬೇತಿ ಕೇಂದ್ರ-01, ಏರೋಪೋನಿಕ್ಸ್ ಕೇಂದ್ರ-01, ತೆರೆದ ಬಾವಿ-01, ಟ್ರಾಕ್ಟರ್ ಮತ್ತು ಯಂತ್ರೋಪಕರಣಗಳು-01. |
| 2. | ತಾಲ್ಲೂಕು ನರ್ಸರಿ, ಚಿಕ್ಕಬಳ್ಳಾಪುರ | 0.20 | 0.20 | - | **ಮೂಲಭೂತ ಸೌಕರ್ಯ**<br>ನೆರಳು ಪರದೆ-01, ಕಛೇರಿ ಕಟ್ಟಡ-01, ಕೊಳವೆ ಬಾವಿ-01. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

| ಕ್ರ. ಸಂ. | ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರಗಳ ಹೆಸರು ಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಬೇಕಾಗಿರುವ ವಿಸ್ತೀರ್ಣ (ಎಕರೆ) | ಮೂಲಭೂತ ಸೌಕರ್ಯ ಮತ್ತು ಸಸ್ಯ ಸಂಪತ್ತಿನ ವಿವರ |
|---|---|---|---|---|---|
| 3. | ಸೊಪ್ಪಹಳ್ಳಿ ತೋಟಗಾರಿಕೆ ಕ್ಷೇತ್ರ | 23.05 | 23.05 | - | <u>ಸಸ್ಯ ಸಂಪತ್ತು</u><br>ಮಾವು=810, ಸಪೋಟ=02, ಸೀಬೆ=200, ನಿಂಬೆ=20, ಕರಿಬೇವು=20, ಹಲಸು=60, ನೆಲ್ಲಿ=20, ನೇರಳೆ=125, ಗೋಡಂಬಿ=50, ಅಂಜೂರ=10, ಚಕ್ಕೋತ=550, ದ್ರಾಕ್ಷಿ=900, ಇತರೆ=400, ಹುಣಸೇ=05 ಮತ್ತು ಸೀತಾಫಲ=25.<br><u>ಮೂಲಭೂತ ಸೌಕರ್ಯ</u><br>ಪಂಪ್ ಹೌಸ್-01,<br>ದಾಸ್ತಾನು ಕೊಠಡಿ-01,<br>ಕಛೇರಿ ಕಟ್ಟಡ-01. |
| 4. | ಶ್ರೀನಿವಾಸ ಸಾಗರ ಉದ್ಯಾನವನ | 3.12 | 0 | 3.12 | - |
| 5. | ಸರ್.ಎಂ. ವಿಶ್ವೇಶ್ವರಯ್ಯ ಬಟಾನಿಕಲ್ ಉದ್ಯಾನವನ | 70.00 | 50.00 | 20.00 | 2000 ವಿವಿಧ ಜಾತಿಯ ಗಿಡಗಳು |
| 6. | ಏರೋಪೋನಿಕ್ಸ್ ಕೇಂದ್ರ, ಚಿಕ್ಕಬಳ್ಳಾಪುರ | 00 | 00 | 00 | - |
| 7. | ಮಾಡಿಕೆರೆ ತೋಟಗಾರಿಕೆ ಕ್ಷೇತ್ರ | 10.00 | 10.00 | - | <u>ಸಸ್ಯ ಸಂಪತ್ತು</u><br>ಮಾವು=157, ಸಪೋಟ=118, ತೆಂಗು=48, ಕರಿಬೇವು=100, ಹಲಸು=40, ನೆಲ್ಲಿ=40, ನೇರಳೆ=135, ಮತ್ತು ಗೋಡಂಬಿ=35.<br><u>ಮೂಲಭೂತ ಸೌಕರ್ಯ</u><br>ದಾಸ್ತಾನು ಕೊಠಡಿ-01, ಕಛೇರಿ ಕಟ್ಟಡ-01. |
| 8. | ಚಿಂತಾಮಣಿ ತಾಲ್ಲೂಕು ನರ್ಸರಿ | 38.00 | 38.00 | - | <u>ಸಸ್ಯ ಸಂಪತ್ತು</u><br>ಅಲಂಕಾರಿಕ=60, ತೆಂಗು=05, ಮತ್ತು ಸೀಬೆ=08.<br><u>ಮೂಲಭೂತ ಸೌಕರ್ಯ</u><br>ಕಛೇರಿ ಕಟ್ಟಡ-01. |
| 9. | ಚಿಕ್ಕದಾಸರಹಳ್ಳಿ ಮಾವು ತೋಟಗಾರಿಕೆ ಕ್ಷೇತ್ರ | 38.00 | 38.00 | - | <u>ಸಸ್ಯ ಸಂಪತ್ತು</u><br>ಮಾವು=1006, ತೆಂಗು=123, ಮತ್ತು ನೇರಳೆ=112.<br><u>ಮೂಲಭೂತ ಸೌಕರ್ಯ</u><br>ಹಸಿರು ಮನೆ-05, ನೆರಳು ಪರದೆ-02, ಎರೆಹುಳು ಗೊಬ್ಬರ ಉತ್ಪಾದನಾ ಘಟಕ-01, ಹನಿನೀರಾವರಿ ಅಳವಡಿಕೆ(ವಿಸ್ತೀರ್ಣ ದಲ್ಲಿ)-01 ಎಕರೆ, ಪಂಪ್ ಹೌಸ್-02, ದಾಸ್ತಾನು ಕೊಠಡಿ-01, ಕಛೇರಿ ಕಟ್ಟಡ-01, ಇತರೆ-02. |
| 10. | ಚಿಕ್ಕದಾರಸಹಳ್ಳಿ ಗೋಡಂಬಿ ತೋಟಗಾರಿಕೆ ಕ್ಷೇತ್ರ | 387 | 300 | - | <u>ಸಸ್ಯ ಸಂಪತ್ತು</u><br>ಮಾವು=500 ಮತ್ತು ಗೋಡಂಬಿ=18000.<br><u>ಮೂಲಭೂತ ಸೌಕರ್ಯ</u><br>ನೆರಳು ಪರದೆ(Insect proof net house)-01, ಪಂಪ್ ಹೌಸ್-01, ಇತರೆ-01. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

| ಕ್ರ. ಸಂ. | ತೋಟಗಾರಿಕೆ ಕ್ಷೇತ್ರ / ಸಸ್ಯಾಗಾರಗಳ ಹೆಸರು ಮತ್ತು ವಿಳಾಸ | ಒಟ್ಟು ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಿದ ವಿಸ್ತೀರ್ಣ (ಎಕರೆ) | ಅಭಿವೃದ್ಧಿ ಪಡಿಸಬೇಕಾಗಿರುವ ವಿಸ್ತೀರ್ಣ (ಎಕರೆ) | ಮೂಲಭೂತ ಸೌಕರ್ಯ ಮತ್ತು ಸಸ್ಯ ಸಂಪತ್ತಿನ ವಿವರ |
|---|---|---|---|---|---|
| 11. | ಶಿಡ್ಲಘಟ್ಟ ತಾಲ್ಲೂಕು ನರ್ಸರಿ | 3.12 | 3.12 | - | **ಸಸ್ಯ ಸಂಪತ್ತು**<br>ಮಾವು=50, ಸಪೋಟ=73 ಮತ್ತು ತೆಂಗು=41.<br>**ಮೂಲಭೂತ ಸೌಕರ್ಯ**<br>ಕಛೇರಿ ಕಟ್ಟಡ-01,<br>ಇತರೆ-01. |
| 12. | ಪಸಪಲೋಡು ತೋಟಗಾರಿಕೆ ಕ್ಷೇತ್ರ | 30.21 | 30.21 | - | **ಸಸ್ಯ ಸಂಪತ್ತು**<br>ಮಾವು=50, ಸಪೋಟ=40 ಮತ್ತು ಗೋಡಂಬಿ=720.<br>**ಮೂಲಭೂತ ಸೌಕರ್ಯ**<br>ಹನಿ ನೀರಾವರಿ ಅಳವಡಿಕೆ(ವಿಸ್ತೀರ್ಣ ದಲ್ಲಿ)-20 ಎಕರೆ,<br>ಪಂಪ್ ಹೌಸ್-01, ಕಛೇರಿ ಕಟ್ಟಡ-01. |
| 13. | ಮಿಣಕನಗುರ್ಕಿ ಸಸ್ಯ ಕ್ಷೇತ್ರ | 1.20 | 0.20 | - | **ಮೂಲಭೂತ ಸೌಕರ್ಯ**<br>ದಾಸ್ತಾನು ಕೊಠಡಿ-01, ಕಛೇರಿ ಕಟ್ಟಡ-01, ಇತರೆ-01. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ .

**4. ತೋಟಗಾರಿಕಾ ಉಪ ನಿರ್ದೇಶಕರು, ಜಿಲ್ಲಾಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲಾ ಮಟ್ಟದ ಕಛೇರಿಯ ಕಾರ್ಯಸಂಘಟನೆಯ ಪಟ್ಟಿ.**

ತೋಟಗಾರಿಕೆ ಉಪ ನಿರ್ದೇಶಕರು

↓

ಕೇಂದ್ರ ಕಛೇರಿ ಸಹಾಯಕರು (ಸಹಾಯಕ ತೋಟಗಾರಿಕೆ ನಿರ್ದೇಶಕರು)

↓

- ತಾಂತ್ರಿಕ ಸಹಾಯಕರು (1)
  - ಸಹಾಯಕ ಸಾಂಖ್ಯಿಕ ಅಧಿಕಾರಿಗಳು(1)
- ಅಧೀಕ್ಷಕರು
  - ಪ್ರಥಮ ದರ್ಜೆ ಸಹಾಯಕರು
  - ದ್ವಿತೀಯ ದರ್ಜೆ ಸಹಾಯಕರು
  - ಬೆರಳಚ್ಚುಗಾರರು
  - ವಾಹನ ಚಾಲಕರು
  - ಅಟೆಂಡರ್
  - ಸೇವಕರು

ಚಿಕ್ಕಬಳ್ಳಾಪುರ ಜಿಲ್ಲೆಯ ವ್ಯಾಪ್ತಿಯಲ್ಲಿ ಒಟ್ಟು 6 ತಾಲ್ಲೂಕುಗಳಿದ್ದು, ಚಿಕ್ಕಬಳ್ಳಾಪುರ, ಚಿಂತಾಮಣಿ, ಗೌರಿಬಿದನೂರು, ಶಿಡ್ಲಘಟ್ಟ, ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ತಾಲ್ಲೂಕುಗಳಿಗೆ ಮುಖ್ಯಸ್ಥರಾಗಿರುತ್ತಾರೆ ಹಾಗೂ ರಾಜ್ಯವಲಯ ವಿಭಾಗಕ್ಕೆ 15 ತೋಟಗಾರಿಕೆ ಕ್ಷೇತ್ರಗಳು ಮತ್ತು 5 ಕಛೇರಿ ನರ್ಸರಿಗಳು ಬರುತ್ತದೆ. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಮುಖ್ಯಸ್ಥರು ಹಾಗು ಎಲ್ಲಾ ತಾಲ್ಲೂಕು ಕಛೇರಿಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತವೆ.

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯು ಈ ಮೇಲ್ಕಾಣಿಸಿದ ಎಲ್ಲಾ ಕಛೇರಿಗಳ ಮೇಲು ಉಸ್ತುವಾರಿ

## 7. ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರುತ್ತದೆ.

**ಸಾಮಾನ್ಯ ಕಾರ್ಯಗಳು:-**

1. ಜಿಲ್ಲೆಯಲ್ಲಿ ಈ ಕಛೇರಿಯು ಕೇಂದ್ರ ಕಛೇರಿಯಾಗಿದ್ದು, ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಆಡಳಿತ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವುದು.
2. ಜಿಲ್ಲೆಯ ತೋಟಗಾರಿಕೆ ಬೆಳೆಗಾರರ ಅವಶ್ಯಕತೆಗಳಿಗೆ ತಕ್ಕಂತೆ ಯೋಜನೆಗಳನ್ನು ರೂಪಿಸುವುದು.
3. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳನ್ನು ತಾಲ್ಲೂಕುವಾರು ಹಂಚಿಕೆ ಮಾಡಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು.
4. ಅಧೀನ ಕಛೇರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.
5. ತೋಟಗಾರಿಕೆ ಕ್ಷೇತ್ರ ಮತ್ತು ನರ್ಸರಿಗಳ ಸರ್ವತೋಮುಖ ಅಭಿವೃದ್ಧಿಪಡಿಸಲು ಅವಶ್ಯವಿರುವ ಮಾರ್ಗದರ್ಶನ ನೀಡುವುದು.
6. ಯೋಜನೆ/ಯೋಜನೇತರ ಬಿಲ್ಲುಗಳಿಗೆ ಮೇಲು ರುಜು ಮಾಡುವುದು.
7. ಜಿಲ್ಲೆಯ ವಿವಿಧ ತಾಲ್ಲೂಕು ತೋಟಗಾರಿಕೆ ಕಛೇರಿಗಳು ಹಾಗೂ ರಾಜ್ಯವಲಯ ಕಛೇರಿಗಳನ್ನು ಪರಿಶೀಲನೆ ನಡೆಸುವುದು.
8. ಜಿಲ್ಲಾ ಮಟ್ಟದಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಮತ್ತು ಪ್ರಗತಿಯ ಪರಿಶೀಲನೆ ಮಾಡಿ ಜಿಲ್ಲಾ ಕ್ರೂಡೀಕೃತ ಪ್ರಗತಿ ವರಧಿಯನ್ನು ತಯಾರಿಸಿ ರಾಜ್ಯ ಮಟ್ಟಕ್ಕೆ ಸಲ್ಲಿಸುವುದು.
9. ವಿಶೇಷ ಯೋಜನೆಗಳಅನುಷ್ಠಾನಕ್ಕೆ ಅವಶ್ಯವಿರುವ ಜಿಲ್ಲಾಮಟ್ಟದ ಸಮಿತಿಗಳು ಸದಸ್ಯ ಕಾರ್ಯದರ್ಶಿ/ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದು.
10. ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಗಳಿಗೆ ಇಲಾಖೆಯ ಪ್ರತಿನಿಧಿಯಾಗಿ ಭಾಗವಹಿಸುವುದು.
11. ಪ್ರಕೃತಿ ವಿಕೋಪ ಸಂಭವಿಸಿದ ಸಮಯದಲ್ಲಿ ಆಗಿರುವ ಹಾನಿಯ ಅಂದಾಜನ್ನು ಪರಿಶೀಲಿಸಿ, ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಸಹಾಯಧನಕ್ಕೆ ಕಂದಾಯ ಇಲಾಖೆಗೆ ಶಿಫಾರಸ್ಸು ಮಾಡುವುದು.

**ವಿಸ್ತರಣೆ ಮತ್ತು ತರಬೇತಿ:**

1. ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಕುರಿತು ರೈತರಿಗೆ ಹಾಗೂ ಸಾರ್ವಜನಿಕರಿಗೆ ಮಾಹಿತಿ ನೀಡುವುದು.
2. ತೋಟಗಾರಿಕೆ ಬೆಳೆಗಳ ಬೇಸಾಯ, ನಿರ್ವಹಣೆ, ಕೊಯ್ಲು, ಸಂಸ್ಕರಣೆ ಕುರಿತು ರೈತರಿಗೆ ತರಬೇತಿ ನೀಡುವುದು.
3. ತೋಟಗಾರಿಕೆಯಲ್ಲಿ ಸಾವಯವ ಕೃಷಿ, ಜೇನು ಕೃಷಿ ಅವಶ್ಯಕ ಹೊಸ ತಂತ್ರಜ್ಞಾನಗಳನ್ನು ರೈತರಿಗೆ ತರಬೇತಿ ವಿಚಾರ ಸಂಕಿರಣ, ಕಾರ್ಯಗಾರ ಮುಂತಾದವುಗಳನ್ನು ಏರ್ಪಡಿಸುವ ಮೂಲಕ ಮಾಹಿತಿ ಒದಗಿಸುವುದು.
4. ತೋಟಗಾರಿಕೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಹೊಸ ಹೊಸ ಯೋಜನೆಗಳ ಮಾಹಿತಿಯನ್ನು ಪತ್ರಿಕೆ, ಆಕಾಶವಾಣಿ, ದೂರದರ್ಶನ ಮುಂತಾದ ಸಮೂಹ ಮಾಧ್ಯಮಗಳ ಮೂಲಕ ರೈತರಿಗೆ ತಲುಪುವಂತೆ ಮಾಡುವುದು.

5. ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾಲಯ ಮುಂತಾದ ಕೃಷಿ ಆಧಾರಿತ ಸಂಶೋಧನ ಕೇಂದ್ರಗಳಿಂದ ವಿವಿಧ ಹೊಸ ತಂತ್ರಜ್ಞಾನಗಳನ್ನು ರೈತರ ತೋಟಗಳಿಗೆ ತಲುಪುವಂತೆ ಮಾಡುವುದು.
6. ರೈತರ ಮಕ್ಕಳಿಗೆ, ರೈತರಿಗೆ, ರೈತ ಮಹಿಳೆಯರಿಗೆ ತರಬೇತಿ ನೀಡುವುದು.
7. ರೈತರನ್ನು ರಾಜ್ಯ ಮತ್ತು ಹೊರ ರಾಜ್ಯಗಳ ಉತ್ತಮ ತೋಟ ಮತ್ತು ಸಂಶೋಧನ ಕೇಂದ್ರಗಳಿಗೆ ಪ್ರವಾಸ ಕೈಗೊಂಡು ರೈತರ ಜ್ಞಾನ ವರ್ಧನೆಗೆ ಸಹಕರಿಸುವುದು.

**ಸಸ್ಯಾಭಿವೃದ್ಧಿ:-**

1. ಉತ್ತಮ ಗುಣಮಟ್ಟದ ಜಿಲ್ಲೆಯ ವಾತಾವರಣಕ್ಕೆ ಹೊಂದುವ ತಳಿಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸುವುದು.
2. ಇಲಾಖೆಯ ತೋಟಗಾರಿಕೆ ಕ್ಷೇತ್ರ/ನರ್ಸರಿಗಳಿಂದ ಉತ್ತಮ ಗುಣಮಟ್ಟದ ಕಸಿ/ಸಸಿಗಳನ್ನು ಉತ್ಪಾದಿಸಲು ಕ್ರಮಕೈಗೊಳ್ಳುವುದು.
3. ಜಿಲ್ಲೆಯ ವಿಶೇಷ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮಕೈಗೊಳ್ಳುವುದು.

**ಪ್ರದೇಶ ವಿಸ್ತರಣೆ:**

1. ಜಿಲ್ಲೆಯ ವಾತಾವರಣಕ್ಕೆ ಸೂಕ್ತವಾದ ತಳಿಗಳನ್ನು ಆಯ್ಕೆ ಮಾಡಿ ಅವುಗಳ ಪ್ರದೇಶ ವಿಸ್ತರಣೆಗೆ ಕೈಗೊಳ್ಳುವುದು.
2. ಆಯಾ ಪ್ರದೇಶಗಳಿಗೆ ಸೂಕ್ತವಾದ ಬೆಳೆಗಳನ್ನು ಮತ್ತು ತಳಿಗಳನ್ನು ಆಯ್ಕೆ ಮಾಡಿ ಯೋಗ್ಯ ಫಲಾನುಭವಿಗಳಿಂದ ಪ್ರದೇಶ ವಿಸ್ತರಣೆ ಕೈಗೊಳ್ಳುವುದು.
3. ಹಣ್ಣು, ತರಕಾರಿ, ಹೂವಿನ ಬೆಳೆಗಳು, ತೋಟದ ಬೆಳೆಗಳು, ಸಾಂಬಾರು ಬೆಳೆಗಳು, ಔಷಧಿ ಬೆಳೆಗಳು, ಸುಗಂಧ ದ್ರವ್ಯ ಬೆಳೆಗಳ ಪ್ರದೇಶ ವಿಸ್ತರಣೆಗೆ ಯೋಗ್ಯವಾದ ಪರಿಸರವನ್ನು ಆಯ್ಕೆ ಮಾಡಿ ಅಲ್ಲಿನ ರೈತರಿಗೆ ಸದರಿ ಬೆಳೆಗಳ ಪ್ರದೇಶ ವಿಸ್ತರಣೆ ಪ್ರೋತ್ಸಾಹಿಸುವುದು.
4. ಹೊಸ ಬೆಳೆಗಳು, ತಳಿಗಳನ್ನು ಪರಿಚಯಿಸುವುದು.
5. ವಿನಾಶದ ಅಂಚಿನಲ್ಲಿ ತೋಟಗಾರಿಕೆ ಬೆಳೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಪಡಿಸುವುದು.

**ನೀರಿನ ಸಂಗ್ರಹಣಾ ಘಟಕಗಳ ನಿರ್ಮಾಣ**

1. ತೋಟಗಾರಿಕೆ ಬೆಳೆಗಳಿಗೆ ಅವಶ್ಯಕವಿರುವ ಪ್ರಮಾಣದಲ್ಲಿ ನೀರಾವರಿ ಸೌಲಭ್ಯ ಒದಗಿಸಲು ಬೇಕಾದ ಸಮುದಾಯ / ಕೃಷಿ ಹೊಂಡಗಳನ್ನು ನಿರ್ಮಿಸಲು ರೈತರನ್ನು ಪ್ರೋತ್ಸಾಹಿಸುವುದು.
2. ವೈಜ್ಞಾನಿಕ ಪದ್ಧತಿಯಲ್ಲಿ ಬೆಳೆಗಳಿಗೆ ಸಾಕಾಗುವ ಪ್ರಮಾಣದ ನೀರನ್ನು ಸಂಗ್ರಹಿಸಿಟ್ಟುಕೊಳ್ಳಲು ವೈಯಕ್ತಿಕ ಕೃಷಿ ಹೊಂಡ ನಿರ್ಮಿಸಲು ಸಹಾಯಧನ ಒದಗಿಸುವುದು.

**ಸಂರಕ್ಷಿತ ಬೇಸಾಯ:**

1. ತೋಟಗಾರಿಕಾ ಬೆಳೆಗಳಿಗೆ ಅವಶ್ಯಕವಿರುವ ಹಸಿರುಮನೆ ನಿರ್ಮಾಣಕ್ಕೆ ರೈತರನ್ನು ಪ್ರೋತ್ಸಾಹಿಸುವುದು.
2. ಶೇಡ್ ನೆಟ್ ಮನೆಯಲ್ಲಿ ತರಕಾರಿಗಳ ಬೇಸಾಯಕ್ಕೆ ಪ್ರೋತ್ಸಾಹಿಸುವುದು.
3. ಹೊಸ ಹೊಸ ಬೆಳೆಗಳನ್ನು ಸಂರಕ್ಷಿತ ಬೇಸಾಯದಲ್ಲಿ ಬೆಳೆಯಲು ಪ್ರೋತ್ಸಾಹಿಸುವುದು.

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

**ಸಮಗ್ರ ಪೋಷಕಾಂಶ ಹಾಗೂ ಸಮಗ್ರ ಪೀಟೆ ನಿರ್ವಹಣೆ**

1. ತೋಟಗಾರಿಕಾ ಬೆಳೆಗಳಿಗೆ ಅವಶ್ಯಕವಿರುವ ಪೋಷಕಾಂಶಗಳ ನಿರ್ವಹಣೆ ಮಾಡಲು ಬೇಕಾದ ಜೈವಿಕ ಗೊಬ್ಬರಗಳ ಉಪಯುಕ್ತತೆ ಬಗ್ಗೆ ಮಾಹಿತಿ ಹಾಗೂ ಮೂಲಗಳ ಬಗ್ಗೆ ಮಾಹಿತಿ ನೀಡುವುದು.
2. ಹಸಿರೆಲೆ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನದಟ್ಟು ಮಾಡಿ ಬಳಕೆಯನ್ನು ಪ್ರೋತ್ಸಾಹಿಸುವುದು.
3. ಜೈವಿಕ ಪದ್ಧತಿಯಲ್ಲಿ ರೋಗ ಮತ್ತು ಕೀಟ ನಿಯಂತ್ರಣ ಪದ್ಧತಿಗೆ ಪ್ರೋತ್ಸಾಹಿಸುವುದು.
4. ಸಾರ್ವಜನಿಕ ವಲಯದಲ್ಲಿ ರೋಗ ಮುನ್ಸೂಚನಾ ಘಟಕಗಳನ್ನು ಸ್ಥಾಪಿಸಿ ಮುಂದೆ ಬರಬಹುದಾದ ರೋಗಗಳ ಕೀಟಗಳ ಹತೋಟಿಗೆ ಅವಶ್ಯಕ ಮಾಹಿತಿಯನ್ನು ರೈತರಿಗೆ ಒದಗಿಸುವುದು.

**ಸಾವಯವ ಕೃಷಿ**

1. ಸ್ಥಳೀಯವಾಗಿ ಲಭ್ಯವಿರುವ ಕೃಷಿ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಅತಿ ಕಡಿಮೆ ಖರ್ಚಿನಲ್ಲಿ ಎರೆಹುಳು ಗೊಬ್ಬರ, ಬಯೋಡೈಜೆಸ್ಟರ್ ಗಳನ್ನು ನಿರ್ಮಿಸಲು ಪ್ರೋತ್ಸಾಹಿಸುವುದು.
2. ಸಾವಯವ ಪರಿವರ್ತನೆಗೆ ರೈತರನ್ನು ಪ್ರೋತ್ಸಾಹಿಸುವುದು.
3. ಸಾವಯವ ಕೃಷಿ ದೃಢೀಕರಣ ವ್ಯವಸ್ಥೆ ಹೊಂದಲು ಮಾಹಿತಿ ನೀಡುವುದು.
4. ಸಾವಯವ ಕೃಷಿ ಅಳವಡಿಕೆ ಕುರಿತು, ಸಾವಯವ ಕೃಷಿಕರಿಗೆ, ಇಲಾಖಾ ವಿಸ್ತರಣಾಧಿಕಾರಿಗಳಿಗೆ ತರಬೇತಿ ನೀಡುವ ವ್ಯವಸ್ಥೆ ಮಾಡುವುದು.
5. ಇಲಾಖಾ ತೋಟಗಾರಿಕೆ ಕ್ಷೇತ್ರಗಳಲ್ಲಿ ಮಾದರಿ ಸಾವಯವ ತೋಟ ನಿರ್ಮಾಣ ಮಾಡಿಸುವುದು.

**ಜೇನು ಕೃಷಿ**

1. ರೈತರ ತೋಟಗಳಲ್ಲಿ ಜೇನು ಸಾಕಣೆಗೆ ಪ್ರೋತ್ಸಾಹಿಸುವುದು.
2. ಜೇನು ಸಾಕಾಣಿಕೆ ಸೊಸೈಟಿಗಳ ಮೂಲಕ ರೈತರಿಗೆ ಏರ್ಪಡಿಸುವುದು.
3. ರೈತರ ತೋಟಗಳ ಬೆಳೆಗಳಲ್ಲಿ ಪರಾಗ ಸ್ಪರ್ಶ ಹೆಚ್ಚಳದಲ್ಲಿ ಜೇಣು ಹುಳುಗಳ ಪಾತ್ರ ಬಗ್ಗೆ ರೈತರಿಗೆ ಅರಿವು ಮೂಡಿಸುವುದು.

**ಕೊಯ್ಲೋತ್ತರ ನಿರ್ವಹಣೆ:-**

1. ತೋಟಗಾರಿಕೆ ಬೆಳೆಗಳಾದ ಹಣ್ಣು, ತರಕಾರಿ ತೋಟದ ಬೆಳೆಗಳು ಔಷಧಿ ಸಸ್ಯಗಳು ಮತ್ತು ಸುಗಂಧ ದ್ರವ್ಯ ಬೆಳೆಗಳ ಕೊಯ್ಲೋತ್ತರ ನಿರ್ವಹಣೆಗೆ ಪ್ರೋತ್ಸಾಹಿಸುವುದು.
2. ತೋಟಗಾರಿಕೆ ಬೆಳೆಗಳ ಅವಶ್ಯಕತೆಗೆ ತಕ್ಕಂತೆ ಪ್ಯಾಕ್ ಹೌಸ್ ಗಳ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.
3. ಶೀತಲ ಗೃಹ ನಿರ್ಮಣಕ್ಕೆ ಪ್ರೋತ್ಸಾಹಿಸುವುದು.
4. ತೋಟಗಾರಿಕೆ ಬೆಳೆಗಳ ಪ್ರಾಥಮಿಕ ಸಂಸ್ಕರಣ ಘಟಕ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

**ತೋಟಗಾರಿಕೆ ಬೆಳೆಗಳಿಗೆ ಮಾರುಕಟ್ಟೆ ಅಭಿವೃದ್ಧಿ:-**

1. ಮಾರುಕಟ್ಟೆಯಲ್ಲಿ ನಿರತರಾದ ಸಂಸ್ಥೆಗಳಾದ ಹಾಪ್ ಕಾಮ್ಸ್ ಜಿಲ್ಲಾ ತೋಟಗಾರಿಕೆ ಬೆಳೆಗಾರರ ಸಂಘಗಳು, ಎ.ಪಿ.ಎಂ.ಸಿ. ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಸಗಟು ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಧನ ಒದಗಿಸುವುದು.
2. ಗ್ರಾಮೀಣ ಮಾರುಕಟ್ಟೆ, ರೈತ ಸಂತೆ, ನೇರ ಮಾರುಕಟ್ಟೆ ನಿರ್ಮಾಣಕ್ಕೆ ಪ್ರೋತ್ಸಾಹಿಸುವುದು.

**ಇತರೆ ಕಾರ್ಯಗಳು:-**

1. ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಾನ್ಯ ತೋಟಗಾರಿಕೆ ನಿರ್ದೇಶಕರು ಮತ್ತಿತರ ಮೇಲಾಧಿಕಾರಿಗಳು ಸೂಚಿಸುವ ವಿಶೇಷ ಕೆಲಸಗಳನ್ನು ನಿರ್ವಹಿಸುವುದು.
2. ಜನಸ್ಪಂದನಾಸಭೆ ಮುಂತಾದ ಸಭೆಗಳಿಗೆ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
3. ಪ್ರಕೃತ್ತಿ ವಿಕೋಪ ಮುಂತಾದ ಸಮಯಗಳಲ್ಲಿ ಜಿಲ್ಲಾಧಿಕಾರಿಗಳಆದೇಶದ ಮೇರೆಗೆ ಕೆಲಸ ನಿರ್ವಹಿಸುವುದು.
4. ಇನ್ನಿತರೆ ಕಾಲಕಾಲಕ್ಕೆ ಸೂಚಿಸಲಾಗುವ ವಿಶೇಷ ಕಾರ್ಯನಿರ್ವಹಿಸುವುದು.

## 4B (II) ಅಧಿಕಾರ/ನೌಕರರುಗಳ ಅಧಿಕಾರ ಮತ್ತು ಕರ್ತವ್ಯಗಳು:-

| | |
|---|---|
| **ತೋ.ಉ.ನಿ** | ಜಿಲ್ಲೆಯ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ರಾಜ್ಯವಲಯ, ಜಿಲ್ಲಾವಲಯ, ಕೇಂದ್ರವಲಯ ಹಾಗೂ NHM, MIS ಯೋಜನೆಗಳಿಗೆ ಸಂಬಂಧಿಸಿದಂತೆ ತೋಟಗಾರಿಕೆ ಉಪ ನಿರ್ದೇಶಕರ ಹುದ್ದೆಗೆ ಸಂಬಂಧಿಸಿದಅಧಿಕಾರ ವ್ಯಾಪ್ತಿಯೊಳಗೆ ಅಭಿವೃದ್ಧಿ ಹಾಗೂ ಆಡಳಿತ ಕೆಲಸ ನಿರ್ವಹಿಸಲು, ಅಧಿಕಾರ ಮೀರಿದ ಪ್ರಸ್ತಾವನೆಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಕೇ.ಕ.ಸ** | ಎಲ್ಲಾ ಶಾಖೆಗಳ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಹಾಗೂ ಅಧೀಕ್ಷಕರು ಸಲ್ಲಿಸುವ ಕಡತಗಳನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿ ತೋಟಗಾರಿಕೆ ಉಪ ನಿರ್ದೇಶಕರವರಿಗೆ ಮಂಡಿಸುವುದು. ಪ್ರಮುಖ ವಿಷಯಗಳನ್ನು ತೋಟಗಾರಿಕೆ ಉಪ ನಿರ್ದೇಶಕರರೊಂದಿಗೆ ಚರ್ಚಿಸಿ ತಮ್ಮಅಧೀನ ಸಿಬ್ಬಂಧಿಗಳೊಂದಿಗೆ ಕಡತಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಕ್ರಮವಹಿಸುವುದು ತೋಟಗಾರಿಕೆ ಉಪ ನಿರ್ದೇಶಕರವರ ಅನುಪಸ್ಥಿತಿಯಲ್ಲಿ ಕಛೇರಿಯ ದೈನಂದಿನ ಕೆಲಸಗಳ ನಿರ್ವಹಣೆ, ಅಧೀಕ್ಷಕರ ಸಹಕಾರದೊಂದಿಗೆ ಎಲ್ಲಾ ಆಡಿಟ್ ಕಡತಗಳನ್ನು ಪರಿಶೀಲಿಸಿ ವೀಲೆವಾರಿ ಕ್ರಮವಹಿಸುವುದು. ಅಧೀನ ಕಛೇರಿಗಳ ವಾರ್ಷಿಕ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| ತಾಸ | ಜಿಲ್ಲಾವಲಯ, ರಾಜ್ಯವಲಯ, ರಾತೋಮಿ. ಹನಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಕಡತ ನಿರ್ವಹಣೆ, ತಾಲ್ಲೂಕುವಾರು ಎಂ.ಎಂ.ಆರ್.ಸಿದ್ದಪಡಿಸುವುದು, ಎಲ್ಲಾ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು ಹಾಗೂ ಇತರೆ ಸುತ್ತೋಲೆಗಳನ್ನು ತಾಲ್ಲೂಕು ಅಧಿಕಾರಿಗಳಿಗೆ ರವಾನಿಸುವುದು, ಕಾರ್ಯಕ್ರಮ/ಯೋಜನೆಗಳ ಅನುಷ್ಠಾನ ಕುರಿತು ಗಮನ ನೀಡುವುದು, ಯೋಜನೆ/ಕಾರ್ಯಕ್ರಮಗಳ |

| | |
|---|---|
| | ವರಧಿ ನೀಡುವುದು ಹಾಗೂ ತಾಂತ್ರಿಕ ಮಂಜೂರಾತಿ ಅಗತ್ಯವಿದ್ದಲ್ಲಿ ನೀಡುವುದು. ಫಲಾನುಭವಿ ಪಟ್ಟಿ ತಾಲ್ಲೂಕುಗಳಿಂದ ಸಂಗ್ರಹಿಸುವುದು, ಯೋಜನೆ/ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿಧಾನಸಭೆ/ ಲೋಕಸಭೆ, ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ತಾಲ್ಲೂಕುಗಳಿಂದ ಪಡೆಯುವುದು ಹಾಗೂ ಕ್ರೂಢೀಕೃತ ವರಧಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವುದು.<br>ಜಿಲ್ಲಾ/ತಾಲ್ಲೂಕು ಪಂಚಾಯತ್ ಯೋಜನೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮಂಜೂರಾತಿಯನ್ನು ಅಗತ್ಯವಿದ್ದಲ್ಲಿ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು. ತೋಟಗಾರಿಕೆ ಬೆಳೆಗಳ ಮೌಲ್ಯ ಮಾಪನ ವರಧಿಯನ್ನು ಪರಿಶೀಲಿಸುವುದು. ರೈತರಿಗೆ ತಾಂತ್ರಿಕ ಮಾಹಿತಿ ನೀಡುವುದು. ಜಿಲ್ಲಾ ಪಂಚಾಯತ್ ತೋಟಗಾರಿಕೆ ಕ್ಷೇತ್ರಗಳ ಫಸಲು ಹರಾಜು ಪ್ರಕ್ರಿಯೆ ಜವಾಬ್ದಾರಿ ವಹಿಸುವುದು ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| ಅಧೀಕ್ಷಕರು | ಎಲ್ಲಾ ವಿಷಯ ನಿರ್ವಾಹಕರು/ಪ್ರ.ದ.ಸ. ಮಂಡಿಸಿದ ಕಡತಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ ಅಧಿಕಾರಿಗಳಿಗೆ ಮಂಡಿಸುವುದು. ಲೆಕ್ಕ ತಪಾಸಣೆ ವರಧಿಗಳಿಗೆ ಅನುಸರಣಾ ಉತ್ತರಗಳನ್ನು ಸಲ್ಲಿಸುವುದು ಮತ್ತು ವಿಚಾರಣೆ ಕಡತಗಳ ನಿರ್ವಾಹಣೆ, ಕಛೇರಿಯ ಮುಖ್ಯಸ್ಥರೊಂದಿಗೆ ತಾಲ್ಲೂಕು ಮಟ್ಟದ ಕಛೇರಿಗಳ ವಾರ್ಷಿಕ ತಪಾಸಣೆ ಕೈಗೊಳ್ಳುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಪ್ರ.ದ.ಸ** | ಹಂಚಿಕೆಯಾದ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿ ನಿಯಮಗಳ ಪ್ರಕಾರ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು. ನಗದು ಪುಸ್ತಕಗಳ ನಿರ್ವಹಣೆ, ರಾಜ್ಯವಲಯ ಹಾಗೂ ಇತರೆ ವಿಶೇಷ ಯೋಜನೆಗಳ ತಾಲ್ಲೂಕು ಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು, ಮಂಜೂರಾತಿ ಕ್ರಮವಹಿಸುವುದು, ವಿವಿಧ ಯೋಜನೆಗಳಅನುದಾನ ಬಿಡುಗಡೆ ಬಗ್ಗೆ ಕ್ರಮವಹಿಸುವುದು. ಸರ್ಕಾರಿ ಆದೇಶ/ಸುತ್ತೋಲೆಗಳ ಕಡತ ನಿರ್ವಹಣೆ, ಕಛೇರಿ ಆದೇಶ ಪುಸ್ತಕ ನಿರ್ವಹಣೆ ಅಧಿಕಾರಿ/ಸಿಬ್ಬಂಧಿಗಳ ರಜೆ, ವೇತನ ಬಡ್ತಿ ಪಿಂಚಣಿ ಸೌಲಭ್ಯ ಇತ್ಯಾದಿ ಕಡತಗಳ ನಿರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ದ್ವಿ.ದ.ಸ** | ಕಡತಗಳ ರಚನೆ, ವಿಷಯವಹಿ ರಚನೆ, ಕಡತಗಳ ಚಲನವಲನ, ಕಡತಗಳ ಕಾಯುವಿಕೆ, ವೇತನ ಬಿಲ್ಲು,ಡಿ.ಸಿ.ಬಿಲ್ಲು, ಎ.ಸಿ.ಬಿಲ್ಲು, ಎನ್.ಡಿ.ಸಿ. ಬಿಲ್ಲು, ಪ್ರವಾಸಭತ್ಯೆ ಬಿಲ್ಲು ತಯಾರಿಸುವುದು ಹಾಗೂ ಸಂಬಂಧಪಟ್ಟ ವಹಿಗಳ ನಿರ್ವಹಣೆ ಮಾಸಿಕ ಖರ್ಚು ಆದಾಯ ತ:ಖ್ತೆ ತಯಾರಿಸುವುದು<br>ಸಾದಿಲ್ವಾರು ಇತರೆ ಬಿಲ್ಲುಗಳಿಗೆ ಮಂಜೂರಾತಿ ಕ್ರಮಕೈಗೊಳ್ಳುವುದು, ಜಿಲ್ಲಾಪಂಚಾಯತ್, ತಾಲ್ಲೂಕುಪಂಚಾಯತ್ ನಿಧಿಗೆ ಸಂಬಂಧಿಸಿದ ತಾಲ್ಲೂಕುಮಟ್ಟದ ಕಛೇರಿಗಳ ಬಿಲ್ಲುಗಳನ್ನು ಪರಿಶೀಲಿಸಿ ಮೇಲು ಸಹಿಗೆ ಮಂಡಿಸುವುದು ಮತ್ತು ಸದರಿ ಯೋಜನೆಗಳಅನುದಾನ ಬಿಡುಗಡೆ ಕ್ರಮ ಕೈಗೊಳ್ಳುವುದು ಖರ್ಚು ಮತ್ತು ಆದಾಯದ ಬಗ್ಗೆ ವರಧಿ ಸಿದ್ದಪಡಿಸುವದು, ವೈದ್ಯಕೀಯ ಬಿಲ್ಲುಗಳನ್ನು ತಯಾರಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಬೆರಳಚ್ಚುಗಾರರು** | ಶಾಖೆಗಳ ಎಲ್ಲಾ ಬೆರಳಚ್ಚು ಕಾರ್ಯವನ್ನು ನಿರ್ವಹಿಸುವುದು ಬೆರಳಚ್ಚ ಮಾಡಿದ ಪ್ರತಿಗಳ ಲೆಕ್ಕವನ್ನು ನಿರ್ವಹಿಸುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು. ಪತ್ರಗಳನ್ನು ಸ್ವೀಕರಿಸುವುದು ಟಪಾಲುಗಳನ್ನು ಶಾಖೆಯಲ್ಲಿ ಹಂಚುವುದು. ಸ್ಟಾಂಫ್ ವಹಿ ನಿರ್ವಹಣೆ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ .

| | |
|---|---|
| **ವಾಹನ ಚಾಲಕರು** | ಇಲಾಖೆಯ ವಾಹನವನ್ನು ವ್ಯವಸ್ಥಿತ ರೀತಿಯಲ್ಲಿ ಸುಸರ್ಜಿತವಾಗಿ ಇರಿಸಿಕೊಳ್ಳುವುದು, ಇಲಾಖಾ ವಾಹನದ ಲಾಗ್ ಬುಕ್ ನಿರ್ವಹಿಸುವುದು ಇಲಾಖಾ ವಾಹನಕ್ಕೆ ಸಂಬಂಧಿಸಿದ ದುರಸ್ಥಿ ವಿಮಾ ಮರು ನೊಂದಾಣಿ ಅವಶ್ಯಕ ದೃಡೀಕರಣವನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯುವುದು, ವಾಹನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು |
| **ಸೇವಕರು** | ಕಛೇರಿಯನ್ನು ಶುಚಿಯಾಗಿಡುವುದು, ಕಡತ ಮತ್ತು ಟಪಾಲುಗಳನ್ನು ಶಾಖೆಗಳಿಗೆ ತೆಗೆದು ಕೊಂಡು ಹೋಗುವುದು ಪತ್ರಗಳ ವಿತರಣೆ, ಅಂಚೆ ಕಛೇರಿಗೆ ಹೋಗಿ ಬರುವುದು ಸರ್ಕಾರಿ ಸುತ್ತೋಲೆಗಳನ್ನ ಸಂಬಂಧಿಸಿದ ಎಲ್ಲಾ ಕಛೇರಿಗಳಿಗೆ ವಿತರಿಸುವುದು, ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |

**4 ಬಿ (III) ನಿಯಮ ತೆಗೆದುಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಕ್ರಮ, ಮೇಲ್ವಿಚಾರಣೆ, ಚಾನಲ್ ಗಳ ಮತ್ತು ಅಕೌಂಟಿಬಲಿಟಿ ಸೇರಿದಂತೆ.**

| | |
|---|---|
| ತೋಉನಿ:- | ಪ್ರಸ್ತಾವನೆಗಳ ಕುರಿತು ತೆಗೆದುಕೊಳ್ಳುವ ಕ್ರಮದ ಬಗ್ಗೆ ತೀರ್ಮಾನಿಸುವುದು, ತಮ್ಮ ಹುದ್ದೆಗೆ ನೀಡಿದ ಅಧಿಕಾರಿ ವ್ಯಾಪ್ತಿಯೊಳಗೆ ಅನುಮೋದಿಸಿ ಮಂಜೂರಾತಿ ನೀಡುವುದು ಅಗತ್ಯ ಸಂದರ್ಭದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡುವುದು. |
| **ಕೇ.ಕ.ಸ.** | ಕಛೇರಿಯ ೆಲ್ಲಾ ಶಾಖೆಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಸಹಾಯಕರು ಮಂಡಿಸಿದ ಕಡತಗಳನ್ನು ಪರಿಶೀಲಿಸಿ ಮಂಡಿಸುವುದು ಪ್ರಮುಖ/ತುರ್ತು ವಿಷಯಗಳನ್ನು ತೋಉನಿ ರವರೊಂದಿಗೆ ಚರ್ಚಿಸಿ ತಮ್ಮಅಧೀನ ಸಿಬ್ಬಂಧಿಗಳಿಂದ ಕಡತವನ್ನು ಶೀಘ್ರವಾಗಿ ವಿಲೇವಾರಿ ಕ್ರಮ ಕೈಗೊಳ್ಳುವುದು. |
| **ತಾಸ:-** | ತಮ್ಮ ವ್ಯಾಪ್ತಿಗೆ ಸೇರಿದ ಇಲಾಖೆಯ ಎಲ್ಲಾ ಯೋಜನಗಳ ಕಡತ/ಕೆಲಸ ನಿರ್ವಹಣೆ ಹಾಗೂ ಮೌಲ್ಯಮಾಪನ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಕಡತಗಳನ್ನು ವಿಳಂಭಮಾಡದೇ ಮುಂದಿನ ಆದೇಶಕ್ಕಾಗಿ ಹಾಗೂ ಕ್ರಮಕ್ಕಾಗಿ ಮಂಡಿಸುವುದು. |
| **ಸ.ಸಾಂ.ಅ:** | ಮೇಲಾಧಿಕಾರಿಗಳ ಸೂಚನೆ ಅನುಸಾರವಾಗಿ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಂಕಿಅಂಶಗಳನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ ದೋಷರಹಿತ ಮಾಹಿತಿಯನ್ನು ತಯಾರಿಸಿ ನಿಗಧಿತಅವಧಿಯೊಳಗೆ ಮಂಡಿಸಿವುದು. |
| **ಅಧೀಕ್ಷಕರು** | ತಮ್ಮ ವ್ಯಾಪ್ತಿಗೆ ಸಂಬಂಧಿಸಿದ ಶಾಖೆಯ ವಿಷಯ ನಿರ್ವಾಹಕರು/ಪ್ರ.ದ.ಸ ಮಂಡಿಸಿದ ಕಡತಗಳನ್ನು ಆ ಪ್ರಕರಣದಲ್ಲಿ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎನ್ನುವ ಬಗ್ಗೆ ನಿಯಮಗಳನ್ನು ನಮೂದಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ಮಂಡಿಸುವುದು. |
| **ವಿಷಯ ನಿರ್ವಾಹಕರು/ ಪ್ರ.ದ.ಸ;** | ತಾವು ಸ್ವೀಕರಿಸಿದ ಪತ್ರಗಳ ಸಂಬಂಧ ನಿಯಮಗಳು ಸರ್ಕಾರಿ ಆದೇಶಗಳು, ಸುತ್ತೋಲೆಗಲು ಇತ್ಯಾದಿ ಸೂಚನೆಗಲನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ಬಿಲ್ಲುಗಳನ್ನು ಆದೇಶಗಳನ್ನು ನಗದು ವಹಿಯನ್ನು ವಿಳಂಭ ಮಾಡದೇ ಮಂಡಿಸುವುದು. |
| **ಬೆರಳಚ್ಚುಗಾರರು** | ಬೆರಳಚ್ಚು ಸಲುವಾಗಿ ನೀಡಿರುವ ೆಲ್ಲಾ ಪತ್ರಗಳನ್ನು ಸ್ಪಷ್ಟವಾಗಿ ಬೆರಳಚ್ಚು ಮಾಡಿ ತ್ವರತವಾಗಿ ಮಂಡಿಸುವುದು. |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

## 4B (IV) ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗಧಿಪಡಿಸಲಾದ ವಿಧಾನಗಳು, ಕಟ್ಟುಪಾಡುಗಳು.

| | |
|---|---|
| ತೋಉನಿ | ಜಿಲ್ಲೆಯಲ್ಲಿ ತೋಟಗಾರಿಕೆ ಉಪ ನಿರ್ದೇಶಕರಿಗೆ ವಹಿಸಿದ ಅಭಿವೃದ್ಧಿ, ವಿಸ್ತರಣೆ ಹಾಗೂ ಆಡಳಿತ ನಿರ್ವಹಣೆ ಅಧೀನ ಅಧಿಕಾರಿ/ಸಿಬ್ಬಂಧಿಗಳಿಂದ ಯಶಸ್ವಿಯಾಗಿ ಮತ್ತು ಶೀಘ್ರವಾಗಿ ನಿರ್ವಹಿಸಲು ಕ್ರಮವಹಿಸುವುದು. ಇಲಾಖೆಯ ಜಿಲ್ಲಾ ಉಸ್ತುವಾರಿ ವಹಿಸುವುದು. |
| **ಕೇ.ಕ.ಸ** | ಕಛೇರಿ ಎಲ್ಲಾ ಶಾಖೆಗಳಿಂದ ಬರುವ ಕಡತ/ವಹಿಗಳನ್ನು ಪರಿಶೀಲಿಸಿ ತೋ.ಉ.ನಿ ರವರಿಗೆ ಮಂಡಿಸುವುದು, ತುರ್ತು ವಿಷಯಗಳ ಕುರಿತು ತೋಉನಿ ರವರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳುವುದು ಹಾಗೂ ತೋಉನಿ ರವರಅನುಪಸ್ಥಿಯಲ್ಲಿ ಕಛೇರಿಯ ದೈನಂದಿನ ಕೆಲಸ ನಿರ್ವಹಿಸುವುದು. |
| **ತಾಸ** | ತಾಂತ್ರಿಕ ಸಹಾಯಕರು ಒಂದು ವಿಭಾಗಕ್ಕೆ ಸಂಬಂಧಿಸಿದ ನಿಯಮಾನುಸಾರ ಕಡತಗಳನ್ನು ಮತ್ತು ವರಧಿಗಳನ್ನು ಪರಿಶೀಲಿಸಿ ಮುಂದಿನ ಆದೇಶ ಕೋರಿ.ಕೇ.ಕ.ಸ/ತೋಉನಿ ರವರಿಗೆ ಮಂಡಿಸುವುದು. |
| **ಸ.ಸಾಂ.ಅ** | ಮೇಲಾಧಿಕಾರಿಗಳ ಸೂಚನೆ ಹಾಗೂ ನಿಯಮಾನುಸಾರ ಜಿಲ್ಲಾ ಮಟ್ಟದಅಂಕಿ ಅಂಶಗಳನ್ನು ಸಂಗ್ರಹಿಸಿ ದೋಷರಹಿತ ಮಾಹಿತಿ ತಯಾರಿಸಿ ಒಪ್ಪಿಸುವುದು. |
| **ಅಧೀಕ್ಷಕರು** | ಕಛೇರಿ ವಿಷಯ ನಿರ್ವಾಹಕರುಗಳು ಮಂಡಿಸುವ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ ಮುಂದಿನ ಆದೇಶ ಕೋರಿ ಕೇ.ಕ.ಸ/ತೋಉನಿ ರವರಿಗೆ ಮಂಡಿಸುವುದು. |
| **ಪ್ರ.ದ.ಸ.** | ಹಂಚಿಕೆಯಾದ ವಿಷಯಗಳನ್ನು ಸಮರ್ಪಕವಾಗಿ ನಿಯಮಗಳ ಪ್ರಕಾರ ಪರಿಶೀಲಿಸಿ ಕಡತ ರಚಿಸಿ ಕಛೇರಿ ಕೈಪಿಡಿಯ ನಿಯಮಾನುಸಾರ ಮುಂದಿನ ಆದೇಶ ಕೋರಿ ಕಡತ/ಬಿಲ್ಲು/ನಗದು ವಹಿ ಮಂಡಿಸುವುದು. |
| **ದ್ವಿ.ದ.ಸ** | ಆವಕ ಜಾವಕ ಮತ್ತು ಆದಾಯ ಖರ್ಚಿನ ತಖ್ತೆ, ಡಿಸಿ ಬಿಲ್ಲುಗಳ ನಿಯಮಾನುಸಾರ ಮಾಡುವುದು ಹಾಗೂ ಮೇಲಾಧಿಕಾರಿಗಳ ಆದೇಶ ಪಾಲಿಸುವುದು. |
| **ಬೆರಳಚ್ಚುಗಾರರ:** | ಕಛೇರಿಯ ಎಲ್ಲಾ ಬೆರಳಚ್ಚು ಕಾರ್ಯಗಳನ್ನು ದೋಷರಹಿತ ನಿರ್ವಹಿಸುವುದು, ಬೆರಳಚ್ಚು ಮಾಡಿದ ಪ್ರತಿಗಳನ್ನು ಲೆಕ್ಕ ಇಡುವುದು ಹಾಗೂ ಗಣಕಯಂತ್ರದ ಕೆಲಸ ನಿರ್ವಹಿಸುವುದು. |
| **ವಾಹನ ಚಾಲಕರು** | ವಹಿಸಲಾದ ಎಲ್ಲಾ ಕೆಲಸಗಳನ್ನು ವಿಳಂಬ ಮಾಡದೇ ಸಮರ್ಪಕವಾಗಿ ನಿರ್ವಹಿಸುವುದು. |
| **ಸೇವಕರು** | ವಹಿಸಲಾದ ಎಲ್ಲಾ ಕೆಲಸಗಳನ್ನು ವಿಳಂಭ ಮಾಡದೇ ಸಮರ್ಪಕವಾಗಿ ನಿರ್ವಹಿಸುವುದು. |

**4B (V) ನೌಕರರ ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ / ಉಪಯೋಗಿಸುವ / ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು / ಸೂಚನೆಗಳ / ಕೈಪಿಡಿಗಳು / ದಾಖಲೆಗಳು ಮತ್ತು ನಿಬಂದನೆಗಳು.**

1. ಕರ್ನಾಟಕ ನಾಗರಿಕ ಸೇವಾ ನಿಯಮಗಳು
2. ಕರ್ನಾಟಕ ನಾಗರಿಕ ಸೇವಾ ನಿಯಮಗಳು ( ಸಿ.ಸಿ.ಎ ನಿಯಮಾವಳಿ)
3. ಕರ್ನಾಟಕ ಆರ್ಥಿಕ ಸಂಹಿತೆ
4. ಕಛೇರಿ ಕೈಪಿಡಿ

5. ವೃಂದ ಮತ್ತು ನೇಮಕಾತಿ ನಿಯಮಗಳು
6. ಆಯವ್ಯಯ ಕೈಪಿಡಿ
7. ಕರ್ನಾಟಕ ಖಜಾನೆ ಸಂಹಿತೆ
8. ಸಾದಿಲ್ವಾರು ವೆಚ್ಚದ ಕೈಪಿಡಿ
9. ಕರ್ನಾಟಕ ನಾಗರಿಕ ಸೇವಾ ನಡತೆ ನಿಯಮ
10. ಕರ್ನಾಟಕ ಪಾರದರ್ಶಕತೆ ಅಧಿನಿಯಮ – 1999
11. ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ – 1999
12. ಮಾಹಿತಿ ಹಕ್ಕು ಅಧಿನಿಯಮ 2005
13. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಮಾರ್ಗಸೂಚಿಗಳು
14. ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಗಳು
15. ರಾಜ್ಯವಲಯ ಹಾಗೂ ಜಿಲ್ಲಾ ಪಂಚಾಯತ್ ಯೋಜನೆಗಳಿಗೆ ಸಂಬಂಧಿಸಿದ ಮಾರ್ಗಸೂಚಿಗಳು
16. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮ
17. ಇಲಾಖೆ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಡೆಲಿಗೇಷನ್ ಆಫ್ ಪಾವರ್ಸ್ ಮತ್ತು ವಿಶೇಷ ಡೆಲಿಗೇಷನ್ ಆಫ್ ಪಾವರ್ಸ್
18. ಸರ್ಕಾರದ ಅಧಿಸೂಚನೆಗಳು (ಸುತ್ತೋಲೆಗಳು)
19. ಇಲಾಖೆಯಿಂದ ಹೊರಡಿಸಿದ ವಿಶೇಷ ಆದೇಶಗಳು ಮತ್ತು ಸುತ್ತೋಲೆಗಳು.
20. ಸುವರ್ಣ ಭೂಮಿ ಯೋಜನೆಯ ಮಾರ್ಗಸೂಚಿಗಳು.
21. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳು.

**4 B (VI) ಕಡತ ಶೀರ್ಷಿಕೆ**

| ಕ್ರ.ಸಂ | ಕಡತದ ಶಾಖೆ | | ದಾಖಲಾತಿಗಳ ಉಲ್ಲೇಖ |
|---|---|---|---|
| 1. | ಸಿಬ್ಬಂದಿ | EST | ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಶಿಸ್ತು, ನಡತೆ ಮತ್ತು ಇತರೆ ವಿಷಯಗಳು. |
| 2. | ಲೆಕ್ಕಶಾಖೆ | Accounts | ಲೆಕ್ಕಪತ್ರ ಹಾಗೂ ಲೆಕ್ಕಪತ್ರಗಳ ಪರಿಶೀಲನೆ ನಗದು ವಹಿ ನಿರ್ವಹಣೆ ಇತ್ಯಾದಿ |
| 3. | ಲೆಕ್ಕ ತಪಾಸಣೆ | Audit | ಮಹಾಲೇಖಪಾಲಕರು ನಿರ್ದೇಶನಾಲಯ ಹಾಗೂ ಜಿಲ್ಲಾ ಪಂಚಾಯತ್ ಕಚೇರಿಗಳ ಲೆಕ್ಕ ತಪಾಸಣೆ ಪರಿಶೀಲನೆ ಹಾಗೂ ಅನುಸರಣಾ ಉತ್ತರ ನಿರ್ವಹಣೆ |
| 4. | ತಾಂತ್ರಿಕ ಸಹಾಯಕರು | TA | ತಾಂತ್ರಿಕ ವಿಭಾಗದ ಎಲ್ಲಾ ಕೆಲಸಗಳ ನಿರ್ವಹಣೆ, ವಿಶೇಷಯೋಜನೆಗಳಿಗೆ ತಾಂತ್ರಿಕ ಕಡತಗಳ ನಿರ್ವಹಣೆ |

1. ಸಾಮಾನ್ಯ ಸ್ವೀಕೃತಿ
2. ನಮೂನೆ VIII ರವಾನೆ ರಿಜಿಸ್ಟರ್
3. ನಮೂನೆ – ಎ ಮುದ್ರಾಂ ರಿಜಿಸ್ಟರ್
4. ನಿಯಮ 27 (ನಿಯಮ 63) ಸ್ಟಾಂಪ್ ರಿಜಿಸ್ಟಾರ್
5. ನಮೂನೆ-6 (ನಿಯಮ 38 ) ನಗದು ಪುಸ್ತಕ ರಿಜಿಸ್ಟರ್
6. ಕ. ಅ. ಸಂ.65 – ಎ ಪ್ರಪತ್ರ-1 (ಅನುಚ್ಛೇದ – 6 ಹಣ ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರ)

7. ಕ.ಖ.ಸಂ.65-ಎ ಬಿಲ್ಲು ಹಾಜರುಪಡಿಸುಲ ಚೀಟಿ ರಿಜಿಸ್ಟರ್
8. ಕ.ಆ.ಸಂ ನಮೂನೆ 62-ಎ ಪರಿವರ್ತನೆಯ ಸಲುವಾಗಿ ಬಿಲ್ಲುಗಳ ರಿಜಿಸ್ಟರ್
9. ನಮೂನೆ ಸಂಖ್ಯೆ-24ಎ ವೇತನ ಬಟವಾಡಿ ಪುಸ್ತಕ (ನಮೂನೆ ಸಂಖ್ಯೆ 24 ಎ)
10. ಆಕಸ್ಮಿಕ ರಜಾ ವಹಿ
11. ಹಿ.ಸ.ತೋ.ನಿ ಕಚೇರಿ ಅಧಿಕಾರಿ / ಸಿಬ್ಬಂದಿ ವರ್ಗದವರ ವೇತನ ಬಿಲ್ಲಿನಲ್ಲಿ ಕಡಿತಗೊಳ್ಳುವ ರಿಜಿಸ್ಟರ್ ಹಬ್ಬದ ಮುಂಗಡ2
12. ಸಾ.ಭ.ನಿ.ಕೆ.ಜಿ.ಐ.ಡಿ, ಎಲ್ ಐ ಸಿ, ವೃತ್ತಿತೆರಿಗೆ, ಜೆ ಐ. ಎಸ್
13. ಲೇಖನ ಸಾಮಾಗ್ರಿ ವಿತರಣಾ ರಿಜಿಸ್ಟರ್
14. ದಿನವಹಿ ದಾಸ್ತಾನು ಪುಸ್ತಕ ರಿಜಿಸ್ಟರ್
15. ಸಾದಿಲ್ವಾರು ಬಿಲ್ಲುಗಳ ವಹಿ
16. ಈ ಕಛೇರಿ ಸಾದಿಲ್ವಾರು ಪುಸ್ತಕ.
17. ಡಿ.ಸಿ.ಬಿಲ್ಲುಗಳನ್ನು ಮೇಲು ಸಹಿ ಮಾಡುವ ವಹಿ
18. ಜಿಲ್ಲಾಪಂಚಾಯತ್ ನಿಂದ ಬಂದ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡುವ ವಹಿ
19. ನಮೂನೆ 24 ನಿಯಮ 58 ಪ್ರಯಾಣ ಭತ್ಯೆ ರಿಜಿಸ್ಟರ್ (ನಮೂನೆ-24 (ನಿಯಮ-58)
20. ಕ.ಅ.ಸಂ./74 ರಲ್ಲಿ ನಿಗಧಿಪಡಿಸಿರುವ ನಮೂನೆ ಸರ್ಕಾರದ ಮೋಟಾರು ವಾಹನದ ಲಾಗ್ ಪುಸ್ತಕ
21. ಮಾಹೆವಾರು ಖರ್ಚಿನ ತ:ಖ್ತೆಯ ರಿಜಿಸ್ಟರ್
22. ಅಧಿಕಾರಿ/ಸಿಬ್ಬಂಧಿಗಳ ಹಾಜರಾತಿ ಪಟ್ಟಿ ಕಡತ
23. ಸಾಮಾನ್ಯ ಭವಿಷ್ಯ ನಿಧಿಯ ಮುಂಗಡ ಡ್ರಾ ಮಾಡುವ ಕಡತ.
24. ವಿದ್ಯುತ್ ಬಳಕೆ ಕಡತ.
25. ವಿಷಯ ವಹಿ ರಿಜಿಸ್ಟರ್
26. ನಮೂನೆ-14 ಅಂತಿಮ ವೇತನ ಪ್ರಮಾಣ ಪತ್ರ
27. ಸಾಧಿಲ್ವಾರು ಬಿಲ್ಲುಗಳ ವಿವರ
28. ನಮೂನೆ 34 ಎ ಪೀಠೋಪಕರಣ ವಹಿ
29. ಬಿ-7 ನಗದು ರಶೀದಿ
30. ಅಧಿಕಾರಿ/ಸಿಬ್ಬಂಧಿಯವರ ಕಾರ್ಯನಿರ್ವಾಹಣಾ ವರಧಿ ಕಡತ
31. ಸಿಬ್ಬಂಧಿಗಳ ಸೇವಾಪುಸ್ತಕ ರಿಜಿಸ್ಟರ್ ಗಳು
32. ಭಾರತ ಸರ್ಕಾರ ಮಾಹಿತಿ ಹಕ್ಕು ನಿಯಮ-2005
33. ಸರ್ಕಾರ ಸುತ್ತೋಲೆಗಳ ಪೈಲ್
34. ಲೆಕ್ಕ ತಪಾಸಣೆ ಪೈಲ್
35. ರಾಷ್ಟ್ರೀಯ ತೋಟಗಾರಿಕೆ ಮಿಷನ್ ನಗದು ಪುಸ್ತಕ ವಹಿ
36. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಡಿ.ಸಿ.ಬಿಲ್ಲುಗಳ ರಿಜಿಸ್ಟರ್
37. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಚೆಕ್ ಗಳನ್ನು ವಿತರಿಸುವ ಕಡತ
38. ಸೂಕ್ಷ್ಮ ನೀರಾವರಿ ಯೋಜನೆಯ ನಗದು ಪುಸ್ತಕ ವಹಿ
39. ಸೂಕ್ಷ್ಮ ನೀರಾವರಿ ಯೋಜನೆಯ ಡಿ.ಸಿ.ಬಿಲ್ಲುಗಳ ರಿಜಿಸ್ಟರ್ ವಹಿ
40. ಸೂಕ್ಷ್ಮ ನೀರಾವರಿ ಯೋಜನೆಯ ಚೆಕ್ ಗಳನ್ನು ವಿವರಿಸುವ ಕಡತ

## 4B (VII) ಪಾಲಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಇರುವ ಏರ್ಪಾಡುಗಳನ್ನು ಸಾರ್ವಜನಿಕರ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು

ಇಲಾಖೆ ಮಾರ್ಗಸೂಚಿ / ಎಂ.ಎಂ.ಆರ್ ಕಾರ್ಯಕ್ರಮಗಳು ಜಿಲ್ಲಾ ಪಂಚಾಯತ್ ಆದೇಶಗಳ ಅಡಿಯಲ್ಲಿ ಯೋಜನೆಗಳ ಅನುಷ್ಠಾನಗೊಳಿಸಲು ಕ್ರಮ ತಿಗೆದುಕೊಳ್ಳುವುದು ಸಾರ್ವಜನಿಕ ಕುಂದುಕೊರತೆಗಳನ್ನು ಕಾಣೂನಿನ ಚೌಕಟ್ಟಿನೊಳಗೆ ನಿರ್ಧರಿಸಲು ಕ್ರಮ ಕೈಗೊಳ್ಳುವುದು.

## 4 B (VIII) ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರು ಸಮಿತಿ ಅಥವಾ ಇತರ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಲು ನಡೆಸುವ ಸೇವೆ ಮತ್ತು ನಡುವಳಿಗಳನ್ನು ಸಾರ್ವಜನಿಕರು ಆಕ್ಷೇಪಿಸಬಹುದೆ? ಅಥವಾ ಇಂತಹ ಸಭೆಗಳ ನಡುವಳಿಗಳನ್ನು ವೀಕ್ಷಿಸಲು ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆಯೇ?

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜಿಲ್ಲಾ ಸಮಿತಿ ಮತ್ತು ಕೇಂದ್ರುವಲಯ ಸೂಕ್ಷ್ಮ ನೀರಾವರಿ ಯೋಜನೆಯಡಿ ಜಿಲ್ಲಾ ತಾಂತ್ರಿಕ ಸಮಿತಿಯ ಮೂಲಕ ಜಿಲ್ಲೆಗೆ ಅವಶ್ಯವಿರುವ ಯೋಜನೆಗಳನ್ನು ಸಿದ್ದಪಡಿಸುವುದು. ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬೇಕಾದ ಅವಶ್ಯಕ ನಿರ್ಣಯಗಳನ್ನು ತೆಗೆದುಕೊಳ್ಳುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜಿಲ್ಲಾಸಮಿತಿ ಮತ್ತು ಜಿಲ್ಲಾ ತಾಂತ್ರಿಕ ಸಮಿತಿಗಳ ಸದಸ್ಯರುಗಳು ಮತ್ತು ಅವುಗಳ ವ್ಯಾಪ್ತಿ ಈ ಕೆಳಕಂಡಂತಿರುತ್ತದೆ.

**ಜಿಲ್ಲಾ ಸಮಿತಿ:-**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರತಿ ಜಿಲ್ಲೆಯಲ್ಲೂ (ರಾಜ್ಯದ ಎಲ್ಲಾ 29 ಜಿಲ್ಲೆಗಳಲ್ಲಿ) ಜಿಲ್ಲಾ ಮಟ್ಟದ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: No.AHD HPP 2005 ದಿನಾಂಕ:01.06.2005 ರಂತೆ ರಚಿಸಲಾಗಿದೆ, ಸಮಿತಿಯ ಸ್ವರೂಪವು ಕೆಳಕಂಡಂತಿರುತ್ತದೆ.

| | | |
|---|---|---|
| 1. | ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು (ಜಿಲ್ಲಾಪಂಚಾಯತ್)------------------ | ಅಧ್ಯಕ್ಷರು |
| 2 | ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ---------------------- | ಸದಸ್ಯರು |
| 3. | ಉಪ ನಿಬಂಧಕರು, ಸಹಕಾರ ಇಲಾಖೆ --------------------------------------- | ಸದಸ್ಯರು |
| 4 | ಜಿಲ್ಲಾ ಮಾರುಕಟ್ಟೆ ಅಧಿಕಾರಿ ---------------------------------------------- | ಸದಸ್ಯರು |
| 5 | ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್)--------------------- | ಸದಸ್ಯ ಕಾರ್ಯದರ್ಶಿ |

**ಜಿಲ್ಲಾಸಮಿತಿಯು ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.**

- ಮಾಹಿತಿ ಸಂಗ್ರಹಣೆ
- ಕ್ರಿಯಾ ಯೋಜನೆಗಳ ತಯಾರಿಕೆ
- ಕಾರ್ಯಕ್ರಮಗಳ ಅನುಷ್ಠಾನಕ್ಕೆ ವ್ಯವಸ್ಥೆ ಮಾಡುವುದು
- ಜಿಲ್ಲೆಗೆ ಬಿಡುಗಡೆ ಮಾಡಿದ ಅನುದಾನದ ಸದ್ಬಳಕೆಯ ಬಗ್ಗೆ ಪರಿಶೀಲನೆ ಮತ್ತು ಭೌತಿಕ ಪ್ರಗತಿಯ ಪರಿಶೀಲನೆ.
- ಜಿಲ್ಲಾ ಮಟ್ಟದಲ್ಲಿ ವಿವಿಧ ಸಂಘ ಸಂಸ್ಥೆಗಳ ನಡುವೆ ಸಮನ್ವಯ ಏರ್ಪಡಿಸುವುದು.

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ .

ಜಿಲ್ಲಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಸಮಿತಿಯಅಧ್ಯಕ್ಷರ ಒಪ್ಪಿಗೆಯ ಮೇರೆಗೆ ಸಭೆಗಳನ್ನು ಕರೆಯತಕ್ಕದ್ದು ಮತ್ತು ಈ ಸಭೆಗಲ ಬಗ್ಗೆ ಸಂಪೂರ್ಣ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಜಿಲ್ಲಾ ಸಮಿತಿಯ ಪ್ರತಿ ಸಭೆಯ ನಡುವಳಿಗಳನ್ನು ದಾಖಲಿಸಿ ಅಧ್ಯಕ್ಷರಅನುಮೋದನೆ ಪಡೆದು ಸಮಿತಿಯ ಸದಸ್ಯರಿಗೆಲ್ಲಾ ಕಳುಹಿಸುವುದರ ಜೊತೆಗೆ ರಾಜ್ಯ ಮಿಷನ್ ಡೈರೆಕ್ಟರ್ ರವರಿಗೆ ಒಂದು ಪ್ರತಿಯನ್ನು ಸಲ್ಲಿಸುವುದು.

**ಸೂಕ್ಷ್ಮ ನೀರಾವರಿ ಯೋಜನೆಯಡಿ ಜಿಲ್ಲಾ ಸಮಿತಿಯ ಮೂಲಕ ಜಿಲ್ಲೆಗೆ ಅವಶ್ಯವಿರುವ ಕಾರ್ಯಕ್ರಮಗಳನ್ನು ರೂಪಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.**

**ಎಲ್ಲಾ ಸಮಿತಿಯ ಈ ಕೆಳಕಂಡ ಸದಸ್ಯರು ಇರುತ್ತಾರೆ.**

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,

ಜಿಲ್ಲಾಪಂಚಾಯತ್, ಚಿಕ್ಕಬಳ್ಳಾಪುರ ಹಾಗೂ ಅಧ್ಯಕ್ಷರು ಜಿಲ್ಲಾ ಸೂಕ್ಷ್ಮ ನೀರಾವರಿ ಸಮಿತಿ

ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್, ಚಿಕ್ಕಬಳ್ಳಾಪುರ-ಸದಸ್ಯರು

ಕೃಷಿ ಜಂಟಿ ನಿರ್ದೇಶಕರು, ಚಿಕ್ಕಬಳ್ಳಾಪುರ- ಸದಸ್ಯರು

ತೋಟಗಾರಿಕೆ ಉಪ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು

4B (IX) ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಅಧಿಕಾರಿ/ನೌಕರರ ದೂರವಾಣಿ ವಿವರಗಳ ಪಟ್ಟಿ.

| ಕ್ರ.ಸಂ. | ಹುದ್ದೆ | ಹೆಸರು | ದುರವಾಣಿ ಸಂಖ್ಯೆ |
|---|---|---|---|
| 1. | ತೋಟಗಾರಿಕೆ ಉಪ ನಿರ್ದೇಶಕರು | ಶ್ರೀ ಕುಮಾರಸ್ವಾಮಿ. | 08156-268760 |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇಕಸ) | ಶ್ರೀ ಅಂಜನ್ ಕುಮಾರ್ ಎಂ. | 08156-268760 |
| 3. | ಸಹಾಯಕ ತೋಟಗಾರಿಕೆ ಅಧಿಕಾರಿ | ಶ್ರೀಮತಿ ಅಂಬಿಕಾ.ಡಿ.ಎಸ್. | 08156-268760 |
| 4. | ಅಧೀಕ್ಷಕರು | ಶ್ರೀ ಹನುಮಂತರಾಜು | 08156-268760 |
| 5. | ಪ್ರಥಮ ದರ್ಜೆ ಸಹಾಯಕರು | ಶ್ರೀ ಬಾಲಸುಬ್ರಮಣ್ಯಂ | 08156-268760 |
| 6. | ದ್ವಿತೀಯ ದರ್ಜೆ ಸಹಾಯಕರು | ಶ್ರೀ ಗಜೇಂದ್ರ.ವಿ | 08156-268760 |
| 7. | ವಾಹನ ಚಾಲಕರು | ಶ್ರೀ ದೇವರಾಜು.ಎ | 08156-268760 |
| 8. | ತೋಟಗಾರಿಕೆ ಸಹಾಯಕರು | ಶ್ರೀ ಕೆಂಡಗಣ್ಣಪ್ಪ | 08156-268760 |
| 9. | ಬೆರಳಚ್ಚುಗಾರರು | ಖಾಲಿ ಹುದ್ದೆ | 08156-268760 |
| 10. | ಸೇವಕ | ಖಾಲಿ ಹುದ್ದೆ | 08156-268760 |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

4B (X) ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸೆಪ್ಟೆಂಬರ್ -2018 ರ ಮಾಹೆಯ ವೇತನದ ವಿವರ.

| ಕ್ರ.ಸಂ. | ಹುದ್ದೆ | ಹೆಸರು | |
|---|---|---|---|
| 1. | ತೋಟಗಾರಿಕೆ ಉಪ ನಿರ್ದೇಶಕರು | ಶ್ರೀ ಕುಮಾರಸ್ವಾಮಿ. | |
| 2. | ಸಹಾಯಕ ತೋಟಗಾರಿಕೆ ನಿರ್ದೇಶಕರು (ಕೇಕಸ) | ಶ್ರೀ ಅಂಜನ್ ಕುಮಾರ್ ಎಂ. | 45139/- |
| 3. | ಸಹಾಯಕ ತೋಟಗಾರಿಕೆ ಅಧಿಕಾರಿ | ಶ್ರೀಮತಿ ಅಂಬಿಕಾ.ಡಿ.ಎಸ್. | 43674/- |
| 4. | ಅಧೀಕ್ಷಕರು | ಶ್ರೀ ಹನುಮಂತರಾಜು | 28458/- |
| 5. | ಪ್ರಥಮ ದರ್ಜೆ ಸಹಾಯಕರು | ಶ್ರೀ ಬಾಲಸುಬ್ರಮಣ್ಯಂ | |
| 6. | ದ್ವಿತೀಯ ದರ್ಜೆ ಸಹಾಯಕರು | ಶ್ರೀ ಗಜೇಂದ್ರ.ವಿ | 17768/- |
| 7. | ವಾಹನ ಚಾಲಕರು | ಶ್ರೀ ದೇವರಾಜು.ಎ | 22577/- |
| 8. | ತೋಟಗಾರಿಕೆ ಸಹಾಯಕರು | ಶ್ರೀ ಕೆಂಡಗಣ್ಣಪ್ಪ | 19449/- |
| 9. | ಬೆರಳಚ್ಚುಗಾರರು | ಖಾಲಿ ಹುದ್ದೆ | |
| 10. | ಸೇವಕ | ಖಾಲಿ ಹುದ್ದೆ | |

## 4 B (XI) ಆಯವ್ಯ ವಿತರಣೆ 2018-19

| ಕ್ರ. ಸಂ. | ಯೋಜನೆಯ ಹೆಸರು | ಭೌತಿಕ ಗುರಿ | ಆರ್ಥಿಕ ಗುರಿ (ರೂ. ಲಕ್ಷಗಳಲ್ಲಿ) |
|---|---|---|---|
| I | **ಕೇಂದ್ರವಲಯ ಯೋಜನೆಗಳು** | | |
| 1 | ಸೂಕ್ಷ್ಮ ನೀರಾವರಿ ಪ್ರದೇಶ ವಿಸ್ತರಣೆ (ಹೆ) | 2191.3 | 1406 |
| 2 | S -05 ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ. | 3237.00 | 2.50454 |
| 3 | S-12 ರಾಷ್ಟ್ರೀಯ ತೋಟಗಾರಿಕೆ ಮಿಷನ್ | 1541.20 | 486.15 |
| 4 | S-17 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಪ್ರಾ.ಶಿಲ್ಕು ಸೇರಿದಂತೆ) | 441.40 | 65.26 |
| II | **ರಾಜ್ಯವಲಯ ಯೋಜನೆಗಳು** | | |
| 5 | S-01 ಕೃಷಿ ಭಾಗ್ಯ (ತೋಟಗಾರಿಕೆ) | 392.43 | 1704.99 |
| 6 | S-10 ಸಮಗ್ರ ತೋಟಗಾರಿಕಾ ಅಭಿವೃದ್ಧಿ | 1421.67 | 222.84 |
| 7 | S-11 ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | 375.80 | 20.72 |
| 8 | S-14 ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ | 17060.00 | 69.60 |
| 9 | S-15 ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗ ಸಮಗ್ರ ನಿಯಂತ್ರಣ ಯೋಜನೆ | 595.56 | 47.00 |

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾ ಪಂಚಾಯತ್) ಚಿಕ್ಕಬಳ್ಳಾಪುರ .

| ಕ್ರ. ಸಂ. | ಯೋಜನೆಯ ಹೆಸರು | ಭೌತಿಕ ಗುರಿ | ಆರ್ಥಿಕ ಗುರಿ (ರೂ. ಲಕ್ಷಗಳಲ್ಲಿ) |
|---|---|---|---|
| 10 | S-16 ತೋಟಗಾರಿಕೆ ಮೂಲಭೂತ ಅಭಿವೃದ್ಧಿ/ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದ ಇರುವ ಮೊತ್ತ-ಲೆಕ್ಕಶೀರ್ಷಿಕೆ:-2401-00-001-2-10 | 134.00 | 12.06 |
| 11 | S-19 ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು | 36.00 | 5.00 |
| 12 | S-20 ಮಧುವನ ಮತ್ತು ಜೇನು ಸಾಕಾಣಿಕೆ ಅಭಿವೃದ್ಧಿ | 180.00 | 5.00 |
| III | **ಜಿಲ್ಲಾ ವಲಯ ಯೋಜನೆಗಳು** | | |
| 13 | D-02 ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ | 20.00 | 10.00 |
| 14 | D-03 ತೋಟಗಾರಿಕೆ ಕಟ್ಟಡಗಳು | 4.00 | 20.00 |
| 15 | D-04 ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | 6.00 | 5.00 |
| 16 | D-05 ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ | 19070.00 | 3.00 |
| 17 | D-06 ಪ್ರಚಾರ ಮತ್ತು ಸಾಹಿತ್ಯ | 1.00 | 5.00 |
| 18 | D-08 ಜೇನು ಸಾಕಾಣಿಕೆ | 99.00 | 7.29 |
| 19 | D-09 ರೈತರಿಗೆ ಸಹಾಯ | 205.00 | 4.00 |
| 20 | D-10 ರೈತರಿಗೆ ತರಬೇತಿ | 250.00 | 1.00 |

**4B (XII) ಸಹಾಯಧನದೊಂದೊಗೆ ನಡೆಸುವ ಯೋಜನೆಗಳು ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರು ಹಣ.**

ಅನುಮೋದಿತ ಕ್ರಿಯಾ ಯೋಜನೆ ಮತ್ತು ಮಾರ್ಗಸೂಚಿಗಳನ್ವಯ ವಿವಿಧ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗಿದ್ದು, ಸಹಾಯಧನದ ಯೋಜನೆಗಳಿಗೆ ಸಂಬಂಧಿಸಿದಂತೆ ಫಲಾನುಭವಿವಾರು ವಿವರಗಳನ್ನು ಆಯಾ ತಾಲ್ಲೂಕು ಕಛೇರಿಗಳ ವಹಿಗಳಲ್ಲಿ ದಾಖಲಿಸಿ, ಯೋಜನೆವಾರು ಫಲಾನುಭವಿಗಳ ಪಟ್ಟಿಯನ್ನು ಮಾನ್ಯ ನಿರ್ದೇಶಕರಿಗೆ ಸಲ್ಲಿಸಲಾಗುತ್ತಿದೆ.

**4B (XIII) ಇಲಾಖೆಯಿಂದಅಥರೈಜೇಷನ್ ಮಂಜೂರಾದ ಅಥವಾ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಪಿಯೆಂಟ್ಸ್ ವಿವರಗಳು.**

ಇಲಾಖೆಯಿಂದ ವಿವಿಧ ಯೋಜನೆ/ಕಾರ್ಯಕ್ರಮಗಳಡಿ ಮಂಜೂರಾದ ಮತ್ತು ರಿಯಾಯಿತಿ ದರದಲ್ಲಿ/ಸಂಪೂರ್ಣ ಉಚಿತವಾಗಿ ಸೌಲಭ್ಯಗಳನ್ನು ಪಡೆದಂತಹ ರೆಸಿಪಿಯೆಂಟ್ಸ್ (ಪಡೆದುಕೊಳ್ಳುವವರು) ಗಳ ವಿವರಗಳನ್ನು ಆಯಾ ಯೋಜನೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಇಡಲಾದ ವಹಿಗಳಲ್ಲಿ ದಾಖಲಿಸಿಡಲಾಗಿರುತ್ತದೆ.

# ತೋಟಗಾರಿಕೆ ಉಪ ನಿರ್ದೇಶಕರು (ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ .

**4B (XIV) ಕುಗ್ಗಿಸಲಾದ ಎಲೆಕ್ಟ್ರಾನಿಕ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿ ವಿವರ ದೂರಕುವಂತೆ ಅಥವಾ ಮಾಹಿತಿ ಇಟ್ಟುಕೊಂಡಿರುವಿಕೆ.**

1. 2016-17ನೇ ಸಾಲಿನ ಮಾರ್ಚ್ ಮಾಹೆಯ ಪ್ರಗತಿ ವರಧಿ.
2. 2017-18ನೇ ಸಾಲಿನ ಮಾರ್ಚ್ ಮಾಹೆಯ ಪ್ರಗತಿ ವರಧಿ.
3. 2018-19ನೇ ಸಾಲಿನ ಮಾರ್ಚ್ ಮಾಹೆಯ ಪ್ರಗತಿ ವರಧಿ.

**4B(XV) ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶ ವಿಚಾರಗಳ ಗ್ರಂಥಾಲಯ ಅಥವಾ ಓದುವ ಕೊಠಡಿಗಳನ್ನು ಒಳಗೊಂಡು ಸಾರ್ವಜನಿಕ ಉಪಯೋಗಕ್ಕಾಗಿ ತೆರೆದಿದ್ದಾರೆ?**

ಈ ಕಛೇರಿಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವ ಮಾದರಿಯಲ್ಲಿ ಯಾವುದೇ ಗ್ರಂಥಾಲಯ ಅಥವಾ ಓದುವ ಕೊಠಡಿಗಳು ಇರುವುದಿಲ್ಲ. ಸಾರ್ವಜನಿಕರು ಕಛೇರಿ ಸಮಯದಲ್ಲಿ ಮಾಹಿತಿ ಕೋರಬಹುದಾಗಿದೆ.

**4B(XVI) ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೆ ವಿವರಗಳು ಸಾರ್ವಜನಿಕ ಮಾಹಿತಿ ಅಧಿಕಾರಿ.**

**ಶ್ರೀ ಎಂ.ಅಂಜನ್ ಕುಮಾರ್.**
ಕೇಂದ್ರ ಕಛೇರಿ ಸಹಾಯಕರು
ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ
ಜಿಲ್ಲಾಪಂಚಾಯತ್, ಚಿಕ್ಕಬಳ್ಳಾಪುರ.
ದೂರವಾಣಿ ಸಂಖ್ಯೆ:9902592502

**ಮೇಲ್ಮನವಿ ಪ್ರಾಧಿಕಾರ**
**ಶ್ರೀ ಕುಮಾರಸ್ವಾಮಿ.,**
ತೋಟಗಾರಿಕೆ ಉಪ ನಿರ್ದೇಶಕರು
(ಜಿಲ್ಲಾಪಂಚಾಯತ್) ಚಿಕ್ಕಬಳ್ಳಾಪುರ.
ದೂರವಾಣಿ ಸಂಖ್ಯೆ:9448999242

**4B(XVII) ನಿಗಧಿಪಡಿಸಿದ ಇತರೇ ವಿಷಯಗಳು**

ಯಾವುದು ಇಲ್ಲ.

ತೋಟಗಾರಿಕೆ ಉಪ ನಿರ್ದೇಶಕರು
ಜಿಲ್ಲಾಪಂಚಾಯತ್, ಚಿಕ್ಕಬಳ್ಳಾಪುರ.